ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ

9.11.98 53C

ಬೆಳಗಾವಿ
ದಿನಾಂಕ: 5-11-1998

ಪತ್ರಿಕಾ ಪ್ರಕಟಣೆ

ಕರ್ನಾಟಕ ರಾಜ್ಯೋತ್ಸವ ಆಚರಣೆ ಸಂಬಂಧದಲ್ಲಿ, ಈಗಾಗಲೇ ಎಲ್ಲ ಪತ್ರಿಕೆಗಳಲ್ಲಿ ''ಬೆಳಗಾವಿಯಲ್ಲಿ ಒಳ್ಳೆ ವೈಭವದಿಂದ ರಾಜ್ಯೋತ್ಸವ ಆಚರಣೆ'' ಎಂದು ಬಂದಿದ್ದರೂ, ಕೆಲವರು ಕೆಲಕಾರಣಗಳನ್ನು ಮುಂದೆಮಾಡಿಕೊಂಡು, ಹೋರಾಟ ಮಾಡುವುದಾಗಿ ಪತ್ರಿಕಾ ಹೇಳಿಕೆ ನೀಡಿದ್ದರಿಂದ ಈ ಕೆಳಗಿನಂತೆ ಸ್ಪಷ್ಟೀಕರಣವನ್ನು, ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

(1) ಮೆರವಣಿಗೆಯಲ್ಲಿ ಕೇವಲ 20 ಒಳ್ಳೆಯ ಖಾಸಗಿ ರೂಪಕವಾಹನಗಳು ಭಾಗವಹಿಸಬೇಕೆಂದೂ, ಅವಕ್ಕೆ ಒಂದು ವಾಹನ ಹಾಗೂ ಅದಕ್ಕೆ 20 ಲೀಟರ್ ಡೀಜಲ್ ಮಾತ್ರ ಕೊಡಬೇಕೆಂತಲೂ ರಾಜ್ಯೋತ್ಸವ ಸಮಿತಿಯ ಸರ್ವಸಾಧಾರಣ ಸಭೆಯಲ್ಲಿ ದಿನಾಂಕ: 8-10-1998ರಂದು ಒಮ್ಮತದಿಂದ ತೀರ್ಮಾನಿಸಲಾಗಿತ್ತು ಹಾಗೂ ಹೋದವರ್ಷದಂತೆ ಈ ವರ್ಷ ಪ್ರತಿ ವಾಹನಕ್ಕೆ ರೂ.500-00 ಪ್ರೋತ್ಸಾಹಧನವನ್ನು ಕೊಡಬಾರದೆಂದು ಸಭೆಯಲ್ಲಿ ಒಮ್ಮತದಿಂದ ತೀರ್ಮಾನಿಸಿದ್ದರಿಂದ ಹಣವನ್ನು ಯಾರಿಗೂ ಕೊಟ್ಟಿರುವುದಿಲ್ಲ. ಈ ನಿರ್ಣಯವು ಸಭೆಯ ನಿರ್ಣಯ.

(2) ಪರಿಸ್ಥಿತಿ ಹೀಗಿದ್ದಾಗ್ಯೂ ದಿನಾಂಕ: 15-10-1998ರೊಳಗಾಗಿ ರೂಪಕವಾಹನಗಳಿಗಾಗಿ ಕೊನೆ ದಿನಾಂಕವೆಂದು, ಇದೇ ಸಮಿತಿಯಲ್ಲಿ ನಿರ್ಧರಿಸಿದ್ದಾಗ್ಯೂ ಕೂಡ, ದಿನಾಂಕ 30-10-1998ರ ವರೆಗೆ ಬಂದ 36 ಸಂಘ: ಸಂಸ್ಥೆಗಳಿಗೆ ವಾಹನ ಪೂರೈಸಲಾಗಿದೆ. ಇಪ್ಪತ್ತರ ಬದಲಾಗಿ, ಉತ್ಸಾಹದಿಂದ ಬಂದ ಎಲ್ಲರಿಗೂ 36 ವಾಹನ ಪೂರೈಸಲಾಗಿದೆ. ಯಾರಿಗೂ ವಾಹನ ಇಲ್ಲವೆಂದು ಸಮಿತಿಯವರು ಹಿಂತಿರುಗಿ ಕಳಿಸಿಲ್ಲ.

(3) ಇನ್ನು ರವಿವಾರ ಪೇಟೆಯಲ್ಲಿ, ಕೆಲವೊಂದು ಜನ ದಿನಾಂಕ: 1-11-1998ರಂದು ಕಲ್ಲು ತೂರಾಟ ನಡೆಸಿದಾಗ ಶಾಂತತೆ ಕಾಯ್ದುಕೊಳ್ಳಲು ಹಾಗೂ ಮೆರವಣಿಗೆಯು ಸುರಕ್ಷಿತವಾಗಿ ಸಾಗಲು ಅನುಕೂಲವಾಗಲು, ಕಲ್ಲೆಸೆದವರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೂ ಮೊದಲು ಗಣಪತಿ ಗಲ್ಲಿಯಲ್ಲಿ ಕಿಡಿಗೇಡಿಗಳು ಬೋರ್ಡುಗಳನ್ನು ಕಿತ್ತು ಹಾಕಲು ಪ್ರಯತ್ನಿಸಿದಾಗ, ಪೋಲಿಸರು ಅವರಿಗೆ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ. ಸದರಿಯವರ ಮೇಲೆ ಕ್ರಮ ಜರುಗಿಸದೇ ಇದ್ದಲ್ಲಿ, ಇನ್ನೂ ಹೆಚ್ಚಿನ ಗಲಭೆ ನಡೆದು ರಾಜ್ಯೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸಿದ ಎಲ್ಲಾ

ತಾಲ್ಲೂಕಿನ ಕಲಾವಿದರಿಗೆ ಶಾಲಾಮಕ್ಕಳಿಗೆ, ವಾಹನಗಳಿಗೆ ಹಾಗೂ ಮೆರವಣಿಗೆ ನೋಡಲು ಬಂದ ಜನರಿಗೆ ಸಾವು-ನೋವು ಉಂಟಾಗಬಹುದಿತ್ತು. ಕೆಲವು ವರ್ಷಗಳಿಂದ ನೆಲಸಿದ ಶಾಂತತಾ ವಾತಾವರಣ ಭಂಗವಾಗುವ ಭಯವಿತ್ತು.

(4) ಕನ್ನಡದ ಬಗ್ಗೆ ಹಾಗೂ ನಾಡಿನ ಬಗ್ಗೆ ಎಲ್ಲರಿಗೂ ಅಭಿಮಾನ ಹಾಗೂ ಹೆಮ್ಮೆ ಇದೆ. ಯಾರಿಗೂ ಅಗೌರವ ತೋರಿದ ಅಥವಾ ತೋರುವ ಪ್ರಶ್ನೆ ಉದ್ಭವಿಸಿಲ್ಲ ಹಾಗೂ ಮುಂದೆಯೂ ಕೂಡ ಉದ್ಭವಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

ಸಹಿ-
(ಜೆ.ವಿ.ಕೊಂಗವಾಡ್)
ಜಿಲ್ಲಾಧಿಕಾರಿಗಳು ಬೆಳಗಾವಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕೈದು ದಿವಸಗಳಿಂದ ಅವಿಶ್ವಾಸ ನಿರ್ಣಯದ ಮೇಲೆ ಇಲ್ಲಿ ಚರ್ಚೆಯಾಗುತ್ತಿದೆ. ಸರ್ಕಾರದ ನಿಷ್ಕ್ರಿಯೆಯ ಬಗ್ಗೆ ಎರಡು ಪ್ರಮುಖ ವಿರೋಧ ಪಕ್ಷಗಳು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ್ದವು. ಆಡಳಿತ ನಡೆಸುವಂಥ ಪಕ್ಷವು ಜನರ ಆಸೆ ಆಕಾಂಕ್ಷೆಗಳನ್ನು ಮರೆತು, ಜವಾಬ್ದಾರಿಯುತವಾಗಿ ಕೆಲಸ ಮಾಡಬೇಕು ಎಂಬ ಅರಿವಿಲ್ಲದೆ ಆಂತರಿಕ ಕಚ್ಚಾಟದ ಮೂಲಕ ರಾಜ್ಯದ ಆಡಳಿತ ಕುಸಿದಿದೆ. ಕಾಂಗ್ರೆಸ್ ಪಕ್ಷದವರು 140 ಜನ ರೈತರನ್ನು ಗುಂಡಿಗೆ ಬಲಿಕೊಟ್ಟರು. ಕಾಂಗ್ರೆಸ್ ಪಕ್ಷ ನಲವತ್ತು ವರ್ಷಗಳ ಆಳ್ವಿಕೆಯಲ್ಲಿ ಆ ಕೆಲಸ ಮಾಡಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕಾಂಗ್ರೆಸ್‌ನವರು 140 ಜನರನ್ನು ಗುಂಡಿಟ್ಟು ಕೊಂದರು. ಹಾಗಾದರೆ ಈ ಸರ್ಕಾರಕ್ಕೆ ಎಷ್ಟು ಸಂಖ್ಯೆಯವರೆಗೆ ಕೊಲ್ಲಲು ಸಪೋರ್ಟ್ ಕೊಡಬೇಕೇ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ರೈತ ಚಳುವಳಿ, ಭಾಷಾ ಚಳುವಳಿ, ದಲಿತ ಚಳುವಳಿಗಳ ಆಧಾರದ ಮೇಲೆ 40 ವರ್ಷಗಳ ಕಾಂಗ್ರೆಸ್ ಆಡಳಿತವನ್ನು ವಿರೋಧ ಮಾಡಿ ಅಧಿಕಾರಕ್ಕೆ ಬಂದಿರಿ. ಮಾನ್ಯ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಹಸಿರು ಟವಲು ನನ್ನ ತಾಯಿ, ಹಸಿರು ಬೋರ್ಡ್ ನನ್ನ ತಂದೆಯೆಂದು ಹೇಳಿದ್ದರು. ಇಡೀ ರೈತ ಕುಲದ ಉದ್ಧಾರಕ್ಕೆ ಬಹಳ ಶ್ರಮಪಟ್ಟು ಬದುಕಿಗೆ ಉತ್ತಮವಾದ ಭವಿಷ್ಯವನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿ ಅಧಿಕಾರಕ್ಕೆ ಬಂದರು. ಆದರೆ ತಾವೇನು ಮಾಡುತ್ತಿದ್ದೀರಿ ಎಂಬ ಬಗ್ಗೆ ಯೋಚನೆ ಮಾಡಬೇಕು. ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೆ ಮೂಲಭೂತ ಸಮಸ್ಯೆಗಳ ಬಗ್ಗೆ ಏನಾದರೂ ಕೆಲಸ ಮಾಡುವುದು ಸಾಮಾನ್ಯ. ಆದರೆ ಈ ದಿಕ್ಕಿನಲ್ಲಿ ಏನಾದರೂ ಬದಲಾವಣೆಯ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಆ ರೀತಿ ಚಿಂತನೆಗಳೇನಾದರೂ ಆಗಿದೆಯೇ ಎಂಬ ಬಗ್ಗೆ ಯೋಚನೆ ಮಾಡಬೇಕು. 1994ರ ಡಿಸೆಂಬರ್ 11 ರಂದು ತಾವು ಅಧಿಕಾರವನ್ನು ವಹಿಸಿಕೊಂಡಾಗ, ಸ್ವಾಭಿಮಾನಿ, ಸಂವೃದ್ಧಿ, ಸ್ವಾವಲಂಬಿ, ರಾಜ್ಯವನ್ನಾಗಿ ಮಾಡುತ್ತೇವೆ, ಸಮರೋಪಾದಿಯಲ್ಲಿ ಕೆಲಸ ಮಾಡುತ್ತೇವೆ, ಮತದಾರರು ನಮ್ಮನ್ನು ಗೌರವಿಸಿದ್ದಾರೆ ಎಂಬ ಭಾವನೆಯಿಂದ ಬಹಳ ಆವೇಶಪೂರಿತವಾಗಿ ಹೇಳಿದ್ದಿರಿ. ನಮ್ಮ ಊರಿನಲ್ಲಿ ಒಂದು ಪೌರಾಣಿಕ ನಾಟಕ ನಡೆಯಿತು. ನಾಟಕದಲ್ಲಿ ವಿಲೇಜ್ ಅಕೌಂಟೆಂಟ್ ಸತ್ಯಹರಿಶ್ಚಂದ್ರನ ಪಾತ್ರವನ್ನು ಮಾಡಿದ್ದ. ಅವರ ಪಾತ್ರವನ್ನು ನೋಡಿ ಜನರೆಲ್ಲಾ ನಗುತ್ತಿದ್ದರು. ಬೆಳಿಗ್ಗೆ ಕಛೇರಿಗೆ ಹೋದರೆ ಆರ್.ಟಿ.ಸಿ. ಕೊಡಲು 15 ರೂ. ಲಂಚ ಕೇಳುತ್ತಾನೆ, ರಾತ್ರಿ ಸತ್ಯ ಆದರೆ ಬೆಳಿಗ್ಗೆ ಹೊತ್ತಿಗೆ ಅದು ಇಲ್ಲ. ಹಾಗೆ ತಮ್ಮ ಆ ಸ್ಲೋಗನ್ ಅಧಿಕಾರವನ್ನು ವಹಿಸಿಕೊಂಡ ನಂತರ ಪತ್ತೆಯೇ ಇಲ್ಲದಂತಾಗಿದೆ. ಮತದಾರರು ಐದು ವರ್ಷಕ್ಕೆ ಒಂದು ಸಲ ಅರಿಸಿ ಕಳುಹಿಸುತ್ತಾರೆ. ಇದರ ಬಗ್ಗೆ ನಾನು ಒಂದು ಕತೆಯನ್ನು ಹೇಳಿದ್ದೆ. ಅಕ್ಬರನನ್ನು ಬೀರಬಲ್ಲ ಮಾತಿನಲ್ಲಿ ಯಾವಾಗಲೂ

ಸೋಲಿಸುತ್ತಿರುತ್ತಾನೆ. ಅಕ್ಬರನು ಬೀರಬಲ್ಲನನ್ನು ಏನಾದರೂ ಮಾಡಿ ಸೋಲಿಸಬೇಂದು ತೀರ್ಮಾನಿಸಿ ಒಮ್ಮೆ ಇಬ್ಬರು ಕುದುರೆ ಮೇಲೆ ಸವಾರಿ ಮಾಡಿಕೊಂಡು ಹೋಗುತ್ತಿರಬೇಕಾದರೆ, ಅಕ್ಬರ್ ಬೀರಬಲ್ಲನಿಗೆ ನಾನು ರಾತ್ರಿ ಒಂದು ಕನಸನ್ನು ಕಂಡೆ, ಅದರಲ್ಲಿ ಇಬ್ಬರೂ ಬಹಳ ಜೋರಾಗಿ ಕುದುರೆಯನ್ನು ಓಡಿಸುತ್ತಿದ್ದೆವು, ಅದರ ರಭಸಕ್ಕೆ ನಾನು ಒಂದು ಗುಂಡಿಯಲ್ಲಿ ನೀನು ಒಂದು ಗುಂಡಿಯಲ್ಲಿ ಬಿದ್ದಿದ್ದೆವು, ನಾನು ಜೇನುತುಪ್ಪದ ಗುಂಡಿಯಲ್ಲಿ ಬಿದ್ದಿದ್ದೆ ನೀನು ಹೇಸಿಗೆ ಗುಂಡಿಯಲ್ಲಿ ಬಿದ್ದಿದ್ದೆ, ಅಷ್ಟರಲ್ಲಿ ಕನಸು ಹೋಗಿಬಿಟ್ಟಿತ್ತು ಎಂದು ಹೇಳಿದ. ಅನಂತರ ಬೀರಬಲ್ಲ ಮುಂದೆ ನನಗೊಂದು ಕನಸು ಬಿದ್ದಿತ್ತು, ನೀವೂ ದಡಕ್ಕೆ ಎದ್ದು ಬಂದಿರಿ, ನಾನೂ ದಡಕ್ಕೆ ಎದ್ದು ಬಂದೆ, ನೀವು ನನ್ನನ್ನು ನೆಕ್ಕುತ್ತಿದ್ದಿರಿ, ನಾನು ನಿಮ್ಮನ್ನು ನೆಕ್ಕುತ್ತಿದ್ದೆ ಎಂದು ಹೇಳಿದ. ಆ ರೀತಿ ಐದು ವರ್ಷದ ಅಧಿಕಾರದಲ್ಲಿ ತಾವು ಹೇಸಿಗೆಯ ಗುಂಡಿಯಲ್ಲಿ ಕುಳಿತಿದ್ದಿರಿ, ಮತದಾರರು ಜೇನು ತುಪ್ಪದ ಗುಂಡಿಯಲ್ಲಿ ಕುಳಿತಿದ್ದರು, ತಾವು ಸ್ವಾಭಿಮಾನಿ, ಸಂವೃದ್ಧಿ, ಸ್ವಾವಲಂಬಿ ಕರ್ನಾಟಕವನ್ನು ಕಟ್ಟುವುದಾಗಿ ಸ್ಲೋಗನ್ ಹೇಳಿದ್ದಿರಿ. ಆ ಮಾತನ್ನು ನಂಬಿ ಜನರು ತಮಗೆ ಮತವನ್ನು ಕೊಟ್ಟರು. ತಾವು ಅಧಿಕಾರಕ್ಕೆ ಬಂದಿರಿ. ಮತದಾರರು ಜೇನುತುಪ್ಪದ ಗುಂಡಿಯಿಂದ ಮೇಲಕ್ಕೆ ಬಂದರು, ಈಗಾಗಲೇ ತಾವು ನಾಲ್ಕು ವರ್ಷದಿಂದ ಮತದಾರರನ್ನು ನೆಕ್ಕುತ್ತಿದ್ದೀರಿ, ಮತದಾರರು ನಾಲ್ಕು ವರ್ಷಗಳಿಂದ ತಮ್ಮನ್ನು ನೆಕ್ಕುತ್ತಲೇ ಇದ್ದಾರೆ. ಇನ್ನೊಂದು ವರ್ಷ ಬಾಕಿ ಉಳಿದುಕೊಂಡಿದೆ. ಅದರಲ್ಲೂ 19 ತಿಂಗಳ ಕಾಲ ಸಮಾಜವಾದಿ ಹೋರಾಟದಲ್ಲಿ ಬೆಳೆದಂತಹ ಒಬ್ಬ ಮುಖ್ಯಮಂತ್ರಿ, ಬಹಳ ಜ್ಞಾನ ಇರತಕ್ಕಂಥ ಒಬ್ಬ ವ್ಯಕ್ತಿ, ಹೊಸ ಬದಲಾವಣೆ, ಹೊಸ ಚಿಂತನೆ ಏನಾದರೂ ಮಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಮೇಲುಕೋಟೆಯಲ್ಲಿ ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳಿದ್ದರು. ಇನ್ನು ಮುಂದೆ ರಾಜಕಾರಣ ಏನಾಗಬಹುದು? ರಾಜ್ಯದಲ್ಲಿ ಯಾವುದೇ ಚಳುವಳಿಗಳಿಲ್ಲ, ಯಾವುದೇ ಹೋರಾಟಗಳಿಲ್ಲ, ಮುಂದಿನ ರಾಜಕಾರಣ ಯಾವ ಬದಲಾವಣೆಯೂ ಇಲ್ಲದೆ ಕೇವಲ ಜಾತಿ,ಮತ, ಗುಂಪುಗಾರಿಕೆ, ಆಸೆ, ಆಮಿಷಗಳಿಗೆ ಬಲಿಯಾಗಿ ಅಭ್ಯರ್ಥಿ ಗೆಲ್ಲಿಸಿ ಕಳುಹಿಸಿದರೆ ಮುಂದಿನ ಶಾಸನ ಸಭೆ, ಮುಂದಿನ ಆಡಳಿತ ವ್ಯವಸ್ಥೆ ಏನಾಗಬಹುದು ಎಂಬುದನ್ನು ಮೇಲುಕೋಟೆಯಲ್ಲಿ ಮುಖ್ಯಮಂತ್ರಿಗಳು ಭಾಷಣದ ಮೂಲಕ ಹೇಳಿದ್ದರು. ಆದರೆ ಅವರೇ ಮುಖ್ಯಮಂತ್ರಿಗಳಾದರು. ಅವರ ಜ್ಞಾನವನ್ನು ನಾನು ವೈಯಕ್ತಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಅವರ ಸೋಂಬೇರಿತನವನ್ನು ನಾನು ಒಪ್ಪುವುದಿಲ್ಲ. ನಾನು ಪ್ರತಿದಿನ ಪತ್ರಿಗೆಳಲ್ಲಿ ನೋಡುತ್ತಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಮಂತ್ರಿಗಳನ್ನು ಕರೆದು ಕೊನೆಯ ಪಕ್ಷ ಅವರವರ ಖಾತೆಗಳನ್ನು ರಿವ್ಯೂ ಮಾಡಿ ಕರ್ನಾಟಕದಲ್ಲಿ ಏನು ಬದಲಾವಣೆಯಾಗಿದೆ, ಏನು ಸಾಧನೆಯಾಗಿದೆ, ನಾವು ಕೊಟ್ಟಂತಹ ಹಣ ಎಷ್ಟರಮಟ್ಟಿಗೆ ಉಪಯುಕ್ತತೆಯಾಗುತ್ತಿದೆ ಎಂಬುದರ ಬಗ್ಗೆ ಒಂದು ಕಾರ್ಯಕ್ರಮವನ್ನೂ ಕೂಡ ಮಾಡಲಿಲ್ಲ ಎಂಬ ಬಗ್ಗೆ ನನಗೆ ವ್ಯಥೆಯಾಗಿದೆ.

ತಮ್ಮಂತಹ ಹಿರಿಯ ರಾಜಕಾರಣಿಗಳೂ ಕೂಡ ಆ ದಿಕ್ಕಿನಲ್ಲಿ ಕೆಲಸ ಮಾಡಲಿಲ್ಲ. ಹೀಗಾದರೆ ಈ ರಾಜ್ಯದ ಭವಿಷ್ಯದ ಬದಲಾವಣೆ ಹೇಗೆ ಸಾಧ್ಯ? ನಾಳೆ ಯಾರಾದರೂ ಅಧಿಕಾರಕ್ಕೆ ಬರಬಹುದು, ಕಾಂಗ್ರೆಸ್‌ನವರು ಅಧಿಕಾರಕ್ಕೆ ಬರಬಹುದು, ಬಿ.ಜೆ.ಪಿ.ಯವರು ಬರಬಹುದು ಅಥವಾ ಬೇರೆ ಯಾರಾದರೂ ಬರಬಹುದು. ಮೂಲಭೂತ ಸಮಸ್ಯೆಗಳಾದ ಶಾಲೆ, ರಸ್ತೆ, ಮೋರಿ, ವಿದ್ಯುತ್ ದೀಪ ನಿವಾರಿಸುವುದು ಸರ್ಕಾರದ ನಿರಂತರ ಕರ್ತವ್ಯ. ಆದರೆ ಹೊಸ ಬದಲಾವಣೆ ನೀವೇನು ಮಾಡಿದ್ದೀರಿ ಎಂಬುದನ್ನು ಇವತ್ತು ಯೋಚನೆ ಮಾಡಬೇಕು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮೀಟಿಂಗ್ ಕರೆದಿದ್ದರು. ಈಗ ಗ್ರಾಮ ಪಂಚಾಯಿತಿಗಳು 5600 ಇವೆ. ಅದನ್ನು 2600 ಗ್ರಾಮ ಪಂಚಾಯಿತಿ ಮಾಡಬೇಕು. ಹಣವನ್ನು ಜಾಸ್ತಿ ಕೊಡುವುದರ ಮೂಲಕ ಆಡಳಿತ ವಿಶಾಲವಾಗಿ ಆದರೆ, ಸಂಬಳ ಕಡಿಮೆ ಆಗುತ್ತದೆ, ಆದರಿಂದ ಬದಲಾವಣೆ ಮಾಡಬಹುದು ಎಂದು ನೀವು ಅಂದು ಹೇಳಿದಿರಿ. ಅದು ಹೇಗೆ ಸಾಧ್ಯ? ನೀವು ಸಂಪನ್ಮೂಲಗಳನ್ನು ಏನೋ ಕ್ರೋಢೀಕರಿಸುತ್ತೀರಿ. ನಮಗೆ ಸ್ವತಂತ್ರ ಬಂದ 50 ವರ್ಷಗಳಲ್ಲಿ ಮಾನ್ಯ ನಜೀರ್ ಸಾಬ್‌ರವರು ಮಾತ್ರ ಗ್ರಾಮಾಂತರ ಪ್ರದೇಶಗಳ ಬಗ್ಗೆ ಯೋಚನೆ ಮಾಡಿದ್ದಾರೆ. ಅಲ್ಲಿಂದೀಚೆಗೆ ಏನಾದರೂ ಬದಲಾವಣೆ ತಂದಿದ್ದೀರಾ? ನಾನು ಹಳ್ಳಿಗಳಲ್ಲಿ ಪಂಚಾಯಿತಿಗಳನ್ನು ನೋಡುತ್ತಿದ್ದೇನೆ. ಯಾವ ಪಕ್ಷ ಬಂದರೂ ಅದೇ ಗುಂಡಿ, ಯಾವ ಪಕ್ಷ ಬಂದರೂ ಅದೇ ಮೋರಿ, ಯಾವ ಪಕ್ಷ ಬಂದರೂ ಅದೇ ಕುಡಿಯುವ ನೀರಿನ ಸಮಸ್ಯೆ ಇದೆ. ಇದರಲ್ಲಿ ಏನಾದರೂ ಬದಲಾವಣೆ ಆಗಬೇಕಲ್ಲವೇ? ಮೊನ್ನೆ ಬೆಳಗಾಂನಲ್ಲಿ ಮಾನ್ಯ ಬಾಬಾಗೌಡ ಪಾಟೀಲ್‌ರು ನನಗೆ ಸಿಕ್ಕಾಗ ನಾನು ಅವರ ಜೊತೆಯಲ್ಲಿ ಮಾತನಾಡಿದೆ. ನಾನು ಅವರಿಗೆ ನೀವು ಬಹಳ ಚಳುವಳಿಯಿಂದ ಬಂದಿರತಕ್ಕವರು, ಗ್ರಾಮೀಣ ಪ್ರದೇಶದ ಬಗ್ಗೆ ಒಂದು ಹೊಸ ಚಿಂತನೆ ಮಾಡಿ ಭಾರತದಾದ್ಯಂತ ಏನಾದರೂ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ಮಾಡಿ ಎಂದು ಹೇಳಿದೆ. ಮಾನ್ಯ ಪ್ರಕಾಶ್‌ರವರಿಗೂ ಕೂಡ ನಾನು ಒಂದು ಸಭೆಯಲ್ಲಿ ಇದೇ ಮಾತನ್ನು ಹೇಳಿದೆ. ಮೊನ್ನೆ ದಿವಸ ನಾನು ಕೇಳಿದಾಗ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಗ್ರಾಮೀಣಾಭಿವೃದ್ಧಿಗಾಗಿ 18 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದರು. ಯೋಜನೆ ಮತ್ತು ಯೋಜನೇತರಗಳಿಂದ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದರೂ ಕೂಡ ಯಾವುದೇ ಮಹತ್ತರವಾದ ಬದಲಾವಣೆಯನ್ನು ಮಾಡಲು ಸಾಧ್ಯವಾಗಿಲ್ಲ. ಇದ್ಯಾಕೆ? ನಾನು ಒಂದು ಸಲಹೆಯನ್ನು ನೀಡಿದೆ, ಒಂದು ಪಂಚಾಯಿತಿಗೆ ಎರಡು ಕೋಟಿ ರೂ.ಗಳ ಫಿಕ್ಸೆಡ್ ಹಣವನ್ನು ನೀವು ಮೀಸಲಾಗಿಡಿ, ಇದರಿಂದ ವರ್ಷಕ್ಕೆ 24 ಲಕ್ಷ ರೂ.ಬಡ್ಡಿ ಬರುತ್ತದೆ. ಯಾವ ಎಂ.ಎಲ್.ಎ., ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿ ಸಹಾಯವಿಲ್ಲದೇ ಗ್ರಾಮ ಪಂಚಾಯಿತಿಯು ಒಂದು ಸಾಯ್ತತ್ತ ಸಂಸ್ಥೆಯಾಗಿ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಒಂದು ಜವಾಬ್ದಾರಿ ಸಂಸ್ಥೆಯಾಗಿ ಬೆಳೆಯುತ್ತದೆ. ಪ್ರತಿ ಗ್ರಾಮ ಪಂಚಾಯಿತಿಗೆ ಎರಡು ಕೋಟಿ ರೂ.ಗಳಂತೆ

ಕೊಡಲು 111/2 ಸಾವಿರ ಕೋಟಿ ರೂ.ಗಳು ಬೇಕಾಗುತ್ತದೆ. ನೀವು ಅಷ್ಟು ಕೋಟಿ ರೂ.ಗಳನ್ನು ಕೊಟ್ಟರೆ ಇಡೀ ಗ್ರಾಮ ಪಂಚಾಯಿತಿಗಳ ಸಮಸ್ಯೆಗಳನ್ನು ಬಗೆಹರಿಸಬಹುದು. ಆದರೆ ನಾವು ಇವತ್ತು 18 ಸಾವಿರ ಕೋಟಿ ರೂ.ಗಳನ್ನು ಗ್ರಾಮೀಣಾಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದೇವೆ. ನಾನು ಈ ರೀತಿ ಮಾಡಿ ಎಂದು ಮಾನ್ಯ ಬಾಬಾಗೌಡ ಪಾಟೀಲ್‌ರನ್ನು ಕೇಳಿದಾಗ ಅವರು ಆ ರೀತಿ ಫಿಕ್ಸೆಡ್‌ನಲ್ಲಿ ಹಣ ಇಟ್ಟು, ಸಂಪನ್ಮೂಲ ಕ್ರೋಢೀಕರಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಮಾನ್ಯ ಪ್ರಕಾಶ್‌ರವರೂ ಕೂಡ ಅದೇ ರೀತಿ ಹೇಳಿದರು. ಅಂದರೆ ಏನೂ ಬದಲಾವಣೆ ಮಾಡದೆ, ಇದೇ ರೀತಿ ಪಂಚಾಯಿತಿ ಚುನಾವಣೆ ನಡೆಯಲಿ ಎನ್ನುತ್ತೀರಾ? ಆ ಚುನಾವಣೆಗಳು ದರಿದ್ರ ಚುನಾವಣೆಗಳು. ಆ ಚುನಾವಣೆಗಳ ಮಟ್ಟ ಯಾವ ಹಂತಕ್ಕೆ ತಲುಪಿದೆ ಎಂದರೆ ಒಬ್ಬೊಬ್ಬ ಪಂಚಾಯಿತಿ ಸದಸ್ಯರು 70-80 ಸಾವಿರ ರೂ.ಗಳವರೆಗೆ ಖರ್ಚು ಮಾಡುವ ಮಟ್ಟಕ್ಕೆ ತಲುಪಿದೆ. ಈ ಚುನಾವಣೆಗಳು ಇಡೀ ಹಳ್ಳಿಯ ದ್ವೇಷ, ಅಸೂಯೆ, ಕರಾಳ ದಿನಗಳನ್ನು ಬೆಳೆಸಿದವು ಅಷ್ಟೆ, ಅವುಗಳಿಂದ ಏನೂ ಪ್ರಯೋಜನ ಆಗಲಿಲ್ಲ. ನೀವು ಇನ್ನೊಂದು ವರ್ಷದ ಕಾಲ ಅಧಿಕಾರದಲ್ಲಿ ಇರುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನೊಬ್ಬನಿಂದ ನಿಮ್ಮ ಪಕ್ಷವನ್ನು ಅಧಿಕಾರದಿಂದ ಇಳಿಸಲು ಆಗುವುದಿಲ್ಲ, ಅಥವಾ ಉಳಿಸಲೂ ಕೂಡ ಆಗುವುದಿಲ್ಲ. ನಾನು ಆಗಲೇ ನನ್ನ ಜವಾಬ್ದಾರಿ ಏನು ಎಂಬುದನ್ನು ಹೇಳಿದೆ. ಆದರೆ ಕನಿಷ್ಟ ಇನ್ನೊಂದು ವರ್ಷದ ಕಾಲಾವಧಿಯಲ್ಲಿ ಏನಾದರೂ ಬದಲಾವಣೆ ಮಾಡತಕ್ಕ ಚಿಂತನೆಯನ್ನು ನೀವು ಮಾಡಬೇಕು. ನಾಳೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಬಹುದು ಅಥವಾ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರಬಹುದು. ಅದು ಬೇರೆ ಪ್ರಶ್ನೆ. ಆದ್ದರಿಂದ ಅತ್ಯಂತ ಜವಾಬ್ದಾರಿಯುತವಾಗಿ ತಾವು ಚಿಂತನೆ ಮಾಡಬೇಕು. ಈಗ ನಾವು ಕುಡಿಯುವ ನೀರಿನ ಬಗ್ಗೆ ಮಾತನಾಡುತ್ತೇವೆ. ಕುಡಿಯುವ ನೀರಿಗೆ ಅಗ್‌ಮೆಂಟೇಷನ್ ಸೇರಿಸಿ ಹೊಸದಾಗಿ ಪೂರ್ಣವಾಗಿ ಮುಗಿಸಬೇಕಾದರೆ ಇನ್ನೂ ಐದು ಸಾವಿರ ಕೋಟಿ ರೂ.ಗಳು ಬೇಕು. ಅಷ್ಟು ಹಣ ಖರ್ಚು ಮಾಡಿದರೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಆದರೆ ಅಷ್ಟೊಂದು ಸಂಪನ್ಮೂಲ ಎಲ್ಲಿದೆ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರಿಂದ ಇವತ್ತು 300-350 ಕೋಟಿ ರೂ.ಗಳನ್ನು ಕೊಡುತ್ತೀರಿ, ಇದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕೃಷಿ ಕಡೆ ಹೆಚ್ಚು ಗಮನ ಹರಿಸಿಲ್ಲ, ಆ ಕಡೆ ಗಮನ ಹರಿಸಿ, ಹೆಚ್ಚಾಗಿ ಎಲ್ಲಾ ಮಂತ್ರಿಗಳೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದವರೇ ಆಗಿದ್ದಾರೆ. ಕೃಷಿ ಮಂತ್ರಿಗಳು ತೋಟಗಾರಿಕೆ ಮಂತ್ರಿಗಳು, ಕಾರ್ಮಿಕ ಮಂತ್ರಿಗಳು, ಪಶುಸಂಗೋಪನ ಮಂತ್ರಿಗಳು ಮೀನುಗಾರಿಕೆ ಮಂತ್ರಿಗಳು ಕಾರ್ಮಿಕ ಮಂತ್ರಿಗಳು, ಕಂದಾಯ ಮಂತ್ರಿಗಳು, ರೇಷ್ಮೆ ಮಂತ್ರಿಗಳು, ಸಕ್ಕರೆ ಮಂತ್ರಿಗಳು, ಭಾರೀ ಮತ್ತು ಸಣ್ಣ ನೀರಾವರಿ ಮಂತ್ರಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಎಲ್ಲರೂ ಕೂಡ ಗ್ರಾಮೀಣ ಭಾಗದಿಂದ ಬಂದವರೇ ಆಗಿದ್ದಾರೆ. ಎಲ್ಲರೂ ನಮ್ಮವರೇ ಆಗಿದ್ದರೂ

ಕಾರ್ಯಕ್ರಮಗಳೇನೂ ಇಲ್ಲ. ಈಗ ನಾವೆಲ್ಲರೂ ಕೃಷಿ ಬಗ್ಗೆ ಮಾತನಾಡುತ್ತೇವೆ. ರೈತರಿಗೋಸ್ಕರ ನಾವು ಏನೇನನ್ನು ಮಾಡಿದ್ದೇವೆ? ಅವರಿಗ್ಯಾಕೆ ನಾವು ಏನೂ ಮಾಡಲಿಕ್ಕಾಗಲಿಲ್ಲ? ಈಗ ರಾಜ್ಯದಲ್ಲಿ 140 ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳಿವೆ. ಇವುಗಳಿಂದ ಇವತ್ತು ಏನು ಬದಲಾವಣೆಯಾಗಿದೆ? ಉದಾಹರಣೆಗೆ ಸಜ್ಜೆ ಮಾರ್ಕೆಟ್‌ನಲ್ಲಿ ಕ್ವಿಂಟಾಲ್‌ಗೆ 320 ರೂ.ಗಳಿಗೆ ತೆಗೆದುಕೊಳ್ಳುತ್ತಿದ್ದಾರೆ, ಹೊರಗಡೆ 530 ರೂ.ಗಳಿಗೆ ಮಾರುತ್ತಿದ್ದಾರೆ. ಜೋಳಕ್ಕೆ ಕ್ವಿಂಟಾಲ್‌ವೊಂದಕ್ಕೆ 350-360 ರೂ.ಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಆದರೆ ಹೊರಗಡೆ ಅದನ್ನೇ ಕ್ವಿಂಟಾಲ್‌ಗೆ 550 ರೂ.ಗಳಂತೆ ಮಾರಾಟ ಮಾಡುತ್ತಿದ್ದಾರೆ. ಉತ್ತಮ ಅಕ್ಕಿಗೆ ಒಂದು ಕ್ವಿಂಟಾಲ್‌ಗೆ 1150 ರೂ. ಸಿಗುತ್ತಿದೆ. ಇಲ್ಲಿ 75 ಕೆ.ಜಿ. ಭತ್ತಕ್ಕೆ 55 ಕೆ.ಜಿ. ಅಕ್ಕಿ ಬರುತ್ತದೆ. ಅದನ್ನು 525 ರೂ.ಗಳನ್ನು ಕೊಟ್ಟು ತೆಗೆದುಕೊಳ್ಳುತ್ತಿದ್ದಾರೆ. ತೊಗರಿ ಬೇಳೆ ಕೆಜಿಗೆ 36-37 ರೂ.ಬೆಲೆ ಮಾರ್ಕೆಟ್‌ನಲ್ಲಿ ಇದ್ದರೆ ರೈತರಿಂದ ಕೆ.ಜಿಗೆ 18-20 ರೂ.ಗಳಂತೆ ತೆಗೆದುಕೊಳ್ಳುತ್ತಿದ್ದೀರಿ. ಅದು ಸಿಪ್ಪೆ ಎಳೆದು ಬಿಟ್ಟು ಮಾರತಕ್ಕಂಥದ್ದು. ಎಲ್ಲಾ ಮಾರವಾಡಿಗಳಿಗೋಸ್ಕರ ನಾವು ಗೋಡೌನ್‌ಗಳನ್ನು ಕೊಟ್ಟಿದ್ದೇವೆಯೇ ಹೊರತು ರೈತರಿಗೆ ಯಾವುದೇ ಗೋಡೌನ್ ಇಲ್ಲ. ಆದ್ದರಿಂದ ಎ.ಪಿ.ಎಂ.ಸಿ. ಮಾರ್ಕೆಟ್‌ನ ಬೋರ್ಡ್ ಅನ್ನು ದಯವಿಟ್ಟು ಚೇಂಜ್ ಮಾಡಬೇಕು. ಅದು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯಾಗಿಲ್ಲ. ಅದು ದಳ್ಳಾಳಿಗಳ ಶೋಷಣೆಯ ಒಂದು ಮಾರುಕಟ್ಟೆ ಸಮಿತಿಯಾಗಿ ಬಿಟ್ಟಿದೆ. ಈಗಾಗಲೇ ಮಂಡ್ಯದಲ್ಲಿ ಬೆಲ್ಲದ ಬೆಲೆ ಕ್ವಿಂಟಾಲ್‌ಗೆ 700 ರೂ.ಗಳಾಗಿದೆ. ಮಾರುಕಟ್ಟೆಯಲ್ಲಿ ಯಾವುದೇ ಅಂಕಿ ಅಂಶಗಳಿಲ್ಲ, ಯಾರೂ ಹೇಳುವವರು, ಕೇಳುವವರು ಇಲ್ಲ. ಸಿರಾದಲ್ಲಿ ನಡೆದ ಗಲಾಟೆಯಿಂದಾಗಿ ಈಗಾಗಲೇ 30 ಸಾವಿರ ಕ್ವಿಂಟಾಲ್ ಕಡಲೆಕಾಯಿಯನ್ನು ರೈತರು ವಾಪಸ್ ತೆಗೆದುಕೊಂಡು ಹೋದರು. ಮಾರುಕಟ್ಟೆ ಎಲ್ಲಾ ಸುಟ್ಟಿದ್ದಾರೆ, ಅದು ನಾಶವಾಗಿದೆ. ಆದರಿಂದ ವ್ಯಾಪಾರ ವಹಿವಾಟು ಸ್ಥಗಿತವಾಗಿದೆ. ಅದರ ಬಗ್ಗೆ ದಯವಿಟ್ಟು ತಾವು ಒಂದು ತೀರ್ಮಾನ ತೆಗೆದುಕೊಂಡು ಆ ಮಾರುಕಟ್ಟೆಯನ್ನು ಪುನಃ ಶುರು ಮಾಡಬೇಕು. ಉದಾಹರಣೆಗೆ ನಾನು ನಿಮಗೆ ಒಂದು ಮಾತನ್ನು ಹೇಳುತ್ತೇನೆ. ಒಂದು ಕ್ವಿಂಟಾಲ್ ಕಡ್ಲೆಕಾಯಿಯಿಂದ 40 ಕೆ.ಜಿ.ಕಡ್ಲೆಕಾಯಿ ಎಣ್ಣೆ ಬರುತ್ತದೆ. ಕೆ.ಜಿ.ಯೊಂದಕ್ಕೆ 50 ರೂ.ಗಳಂತೆ 40 ಕೆ.ಜಿ. ಎಣ್ಣೆಗೆ 2 ಸಾವಿರ ರೂ.ಗಳಾಗುತ್ತದೆ. ಹಿಂಡಿಗೆ ಕೆ.ಜಿ.ಗೆ 8 ರೂ.ಗಳಂತೆ 50 ಕೆ.ಜಿಗೆ 400 ರೂ.ಗಳಾಗುತ್ತದೆ. ಒಂದು ಕ್ವಿಂಟಾಲ್ ಕಡ್ಲೆಕಾಯಿಯಿಂದ ಸುಮಾರು 2400 ರೂ.ಗಳ ಆದಾಯ ಇದೆ. ಆದರೆ ಈಗ ಕ್ವಿಂಟಾಲ್ ಕಡ್ಲೆಕಾಯಿಗೆ 550-1150 ರೂ.ಗಳ ಬೆಲೆ ಕೊಡುತ್ತಿದ್ದಾರೆ. ಎಣ್ಣೆ ವ್ಯಾಪಾರಕ್ಕೂ, ಎಣ್ಣೆ ಉತ್ಪಾದನೆಗೂ, ಮಾರುಕಟ್ಟೆಯಲ್ಲಿ ಮಾರತಕ್ಕಂಥ ಕಡ್ಲೆಕಾಯಿಗೂ ಸಂಬಂಧ ಇರಬೇಕಲ್ಲವೇ? ಕೊನೆಯ ಪಕ್ಷ ಇದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿ ಒಂದು ನಿರ್ಣಯವನ್ನು ಕೈಗೊಂಡು ಕನಿಷ್ಟ ದರವನ್ನು ಕಡ್ಲೆಕಾಯಿಗೆ ಕೊಡುವಂತಹ ವ್ಯವಸ್ಥೆಯನ್ನು ನೀವು ಮಾಡಬೇಕು. ಸೂರ್ಯಕಾಂತಿಗೆ ಇಲ್ಲಿ ಕ್ವಿಂಟಾಲ್‌ಗೆ 1100 ರೂ.ಗಳ ಬೆಲೆ ಇದ್ದರೆ ಹೊರಗಡೆ ಅದು

1300 ರೂ.ಗಳ ಬೆಲೆಗೆ ಮಾರಾಟವಾಗುತ್ತದೆ. ಇನ್ನು ನಮ್ಮ ಕ್ಷೇತ್ರದಲ್ಲಿ ಮೂರು ಕೊಲೆಯಾಗಿದೆ. ಅದು ಯಾವ ಮಟ್ಟದ ಕೊಲೆ ಎಂದರೆ ಅಬ್ಕಾರಿಯಿಂದ ಸರ್ಕಾರಕ್ಕೆ ಸುಮಾರು 900 ಕೋಟಿ ರೂ.ಗಳು ಬರುತ್ತದೆ ಎಂದು ನೀವು ಹೇಳಿದಿರಿ. ಆದರೆ ತಾವು ಅಧಿಕಾರಕ್ಕೆ ಬಂದ ಮೇಲೆ ನಾನು ನೋಡಿದೆ, ಇಡೀ ಎಲ್ಲಾ ಅಂಗಡಿಗಳಲ್ಲೂ ಅರ್ಧಾಕ್ ಪ್ಯಾಕೆಟ್, ಟೈಗರ್, ಜಾಗಿ, ಜಂಬುಲಿಂಗಂ ಮುಂತಾದ ಹೆಸರಿನ ಯಾವ್ಯಾವ ಡ್ರಿಂಕ್ಸ್ ಇವೆಯೋ ಎಲ್ಲವೂ ಪೆಟ್ಟಿಗೆ ಅಂಗಡಿಗಳಲ್ಲಿ ದೊರೆಯುತ್ತಿವೆ. ಅವುಗಳ ಮೇಲೆ ಸರ್ಕಾರಕ್ಕೆ ಯಾವುದೇ ನಿಯಂತ್ರಣ ಇಲ್ಲ. ಹುಲಿಕೇರಿಯಂತಹ 70 ಮನೆಗಳಿರುವ ಚಿಕ್ಕ ಗ್ರಾಮದಲ್ಲಿ ಒಬ್ಬಳು ಎರಡು ಮಕ್ಕಳ ತಾಯಿ ಇದ್ದಾಳೆ. ಪಕ್ಕದ ಮನೆ ಹುಡುಗ ಕೆಟ್ಟ ಕಣ್ಣಿನಿಂದ ನೋಡಿದನೆಂದು ತನ್ನ ಗಂಡನ ಜೊತೆ ಹೇಳಿದಳು. ಆತನಿಗೆ ಗೊತ್ತಾದ ನಂತರ ಪೆಟ್ಟಿಗೆ ಅಂಗಡಿಗೆ ಹೋಗಿ ಒಂದು ಬಾಟಲು ತೆಗೆದುಕೊಂಡು ಕುಡಿದ; ತರುವಾಯ ಪಂಚಾಯಿತಿ ಕರೆದರು. ಅಲ್ಲಿ 'ಏಕೆ ನನ್ನ ಹೆಂಡತಿಯನ್ನು ಕೆಟ್ಟ ಕಣ್ಣಿನಿಂದ ನೋಡಿದೆ?' ಎಂದು ಪ್ರಶ್ನೆಸುತ್ತಿದ್ದಂತೆ ಮಾತುಕತೆ ಶುರುವಾಗಿ ಆತ' ನೀವೇನು ಮಾಡುವುದಕ್ಕಾಗುತ್ತದೆ?' ಎಂದಾಗ ಈತ ಕುಡಿದ ಮತ್ತಿನಲ್ಲಿ ರೇಷ್ಮೆ ಸೊಪ್ಪು ಕತ್ತರಿಸುವ ಚಾಕು ತಂದು ಇಬ್ಬರಿಗೆ ಇರಿದಾಗ ಇಬ್ಬರೂ ಸತ್ತರು. ನನ್ನಿಂದ ಹೀಗಾಯಿತಲ್ಲ ಎಂದು ಆ ಮಹಿಳೆ ಸಹ ನೇಣು ಹಾಕಿಕೊಂಡು ಸತ್ತಳು. ಗಲಾಟೆಯಲ್ಲಿ ಇನ್ನೊಬ್ಬನಿಗೆ ಏಟು ಬಿದ್ದು ಆತ ಕೆ.ಆರ್.ಆಸ್ಪತ್ರೆಯಲ್ಲಿ ಸಾವು-ಬದುಕಿನ ನಡುವೆ ಹೋರಾಡುತ್ತಿದ್ದಾನೆ. ಆತನೀಗ ಜೈಲಿನಲ್ಲಿದ್ದಾನೆ ಈಗ ಯಾರನ್ನು ಕೇಳುವುದು? ಯಾರು ಡ್ರಿಂಕ್ಸ್ (ಥರ್ಡ್ಸ್) ತಯಾರಿಸಿದರಲ್ಲಾ, ಅವರನ್ನು ಕೇಳುವುದೇ? ಮದ್ಯವನ್ನು ಎಲ್ಲಾ ಅಂಗಡಿಗಳಲ್ಲಿ ಮಾರುವಂತೆ ವ್ಯವಸ್ಥೆ ಸೃಷ್ಟಿಸಿದ ಸರ್ಕಾರವನ್ನು ಕೇಳುವುದೇ? ಮೊನ್ನೆ ದಿವಸ ನಾನು ಊರಿಗೆ ಹೋಗಿದ್ದಾಗ ಆ ಆಕ್ರಂದನವನ್ನು ನೋಡುವುದಕ್ಕಾಗುತ್ತಿರಲಿಲ್ಲ, ಅವರು ತುಂಬ ಬಡತನದಲ್ಲಿರುವವರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಪ್ರಕಾಶ್‌ರವರು 'ಜನತಾ ನ್ಯಾಯಾಲಯ'ವನ್ನು ಪ್ರತಿ ಪಂಚಾಯಿತಿಯಲ್ಲೂ ಮಾಡುತ್ತೇವೆಂದರು. ತಾವು ಜನತಾ ನ್ಯಾಯಾಲಯವನ್ನು ಮಾಡುವುದರ ಮೂಲಕ ಜನರ ಸಮಸ್ಯೆಯನ್ನು ಕನಿಷ್ಠ ಸುಧಾರಣೆ ಮಾಡುವ ಕುರಿತು ಚಿಂತಿಸುತ್ತೀರಾ? ಈ ಕುರಿತು ಒಂದು ಉದಾಹರಣೆ ಕೊಡುವುದಾದರೆ, 3-4 ವರ್ಷಗಳ ಹಿಂದೆ ನ್ಯಾಯಾಲಯ ಒಂದು ವಿಷಯಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿತು. ಏನೆಂದರೆ, 'ಒಂದು ಜಮೀನಿನ ಮೇಲೆ ಗಾಡಿಯನ್ನು ಹೊಡೆದುಕೊಂಡು ಹೋಗಲು ಇಂತಿಷ್ಟು ಅಡಿ ಜಾಡಿನ ಜಾಗ ಇರಬೇಕೆಂದು ಕೇಳಿ ಒಬ್ಬ ನ್ಯಾಯಾಲಯಕ್ಕೆ ಹೋಗಿದ್ದ. ನ್ಯಾಯಾಲಯ ತೀರ್ಪು ಕೊಟ್ಟಿತು. 'ನೀನು ಆ ಜಮೀನಿನ ಮೇಲೆ ಗಾಡಿಯನ್ನು ಹೊಡೆಯಬಹುದು, ಆದರೆ, ಮಾರ್ಗದಲ್ಲಿರುವ ಮರ-ಗಿಡಗಳನ್ನು ಮುಟ್ಟಬಾರದು, ಈಡನ್ನು ಮುಟ್ಟಬಾರದು' ಎಂದು. ಗಾಡಿಯಲ್ಲಿ ಕಬ್ಬಿನ ಕಟ್ಟು ತುಂಬಿ ಗೂಟ ಹಾಕಿದರೆ ಎಷ್ಟು ಎತ್ತರ ಬರುತ್ತದೆಂದು ನ್ಯಾಯಾಲಯಕ್ಕೆ ಗೊತ್ತಿಲ್ಲ. ಆತ ಏನು ಮಾಡಿದನೆಂದರೆ, ಗಾಡಿಯಲ್ಲಿ ಕಬ್ಬು ತುಂಬಿಕೊಂಡು ಕೋರ್ಟು ತಿಳಿಸಿರುವ ಮಾರ್ಗವಾಗಿ

ಹೊಡೆದುಕೊಂಡು ಬಂದ, ಮರ ತಗುಲಿತು, ಮರದ 2-3 ಕೊಂಬೆ ಕಡಿದು ಹಾಕಿದ, ಜಾಡು ಹೋಗಬೇಕಾದರೆ ಈಡನ್ನು ಕೆತ್ತಲೇಬೇಕಾಯಿತು, ಆತ ಬಂದು ತಡೆದು 'ಕಾನೂನು ಪ್ರಕಾರ ಹೊಡೆಯುವಂತಿಲ್ಲ' ಎಂದ, 'ನನಗೆ ಕೋರ್ಟ್ ಆದೇಶ ಕೊಟ್ಟಿದೆ' ಎಂದು ಇನ್ನೊಬ್ಬ ಹೇಳಿದಾಗ 'ಕೋರ್ಟ್ ಆದೇಶ ಕೊಟ್ಟಿರಬಹುದು, ಆದರೆ, ಮರ ಕಡಿಯಬಾರದು, ಈಡು ಮುಟ್ಟಬಾರದೆಂಬ ವಿಚಾರದ ಮೇಲೆಯೇ ಕೋರ್ಟು ತೀರ್ಪು ಕೊಟ್ಟಿರುವುದು' ಎಂದಾಗ ಮಾತಿಗೆ ಮಾತು ಬೆಳೆದು ಗಲಾಟೆಯಾದಾಗ ಅಲ್ಲಿದ್ದ ಐದು ಜನರಿಗೆ ಏಟು ಬಿದ್ದು ಹೊಲಿಗೆ ಹಾಕಿಕೊಂಡರು ಮತ್ತು ಗಾಡಿ ಹೊಡೆಯುತ್ತಿದ್ದ ಕಡೆಯ ಮೂರು ಜನರು ತಲೆಗೆ ಹೊಲಿಗೆ ಹಾಕಿಕೊಂಡರು. ಕೊನೆಗೆ ಊರಿನ ಜನರೆಲ್ಲರೂ ಸೇರಿಕೊಂಡು ಗಾಡಿಯ ಜಾಡಿನ ಬಗ್ಗೆ ಉದ್ಭವಿಸಿದ್ದ ಸಮಸ್ಯೆಯನ್ನು ಬಗೆಹರಿಸಿದರು. ತಾವು ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾಗಿದ್ದರೂ ಜನತಾ ನ್ಯಾಯಾಲಯವನ್ನು ಸೃಷ್ಟಿಸಿ ಅಲ್ಲಿ ಆಗಿಂದಾಗ್ಗೆ ಉದ್ಭವಿಸುವ ಇಂತಹ ಕನಿಷ್ಠ ಸಾಮಾಜಿಕ ಸಮಸ್ಯೆಗಳನ್ನು ಹೋಗಲಾಡಿಸುವಂಥ ಯೋಚನೆ ಮಾಡಬೇಕು. ನಾವು ಐಎಎಸ್, ಐಪಿಎಸ್ ಆಫೀಸರ್, ಇನ್ನೊಬ್ಬರ ಬಗ್ಗೆ ಮಾತನಾಡುತ್ತೇವೆ. ಅವರುಗಳಿಗೆ ನಾವು ಯಾವ ತರಹದ ಶಿಕ್ಷಣವನ್ನು ಕೊಟ್ಟಿದ್ದೇವೆ? ಸಮಾಜದ ಬಗ್ಗೆ ಸ್ಪಷ್ಟ ಪರಿಚಯವಿಲ್ಲದಿರುವ ಅವರಿಗೆ ಶಿಕ್ಷಣ ಕೊಟ್ಟು ಅವರಿಂದ ಸಮಾಜವನ್ನು ಬದಲಾವಣೆ ಮಾಡಲು ಸಾಧ್ಯವೇ? ಹೇಗಾಗಿದೆಯೆಂದರೆ, ಸಿನಿಮಾದಲ್ಲಿ ಭತ್ತ ಬೆಳೆಯುವ ರೀತಿ ತೋರಿಸುವಂತೆ 'ಬದುಕು' ಸಹ ಅದೇ ರೀತಿ ಎಂದು ತಿಳಿದುಕೊಂಡಿದ್ದಾರೆ. ಸಿನಿಮಾದಲ್ಲಿ ನಾಟಿ ಹಾಕುತ್ತಾರೆ, ಅಲ್ಲಿಯೇ ಕುಯಿಲು ಕುಯ್ಯುತ್ತಾರೆ, ಅಲ್ಲಿಯೇ ಭತ್ತ ತೂರುತ್ತಾರೆ, 'ಓಹೋ' ಎಂದು ಒಂದು ಹಾಡು ಹೇಳುತ್ತಾ ಭತ್ತ ತುಂಬಿಕೊಂಡು ಮನೆಗೆ ಬರುತ್ತಾರೆ. ವಾಸ್ತವದಲ್ಲಿ ಭತ್ತವನ್ನೂ ಸಹ ಅದೇ ರೀತಿ ಬೆಳೆಯುವುದೆಂದು ತಿಳಿದುಕೊಂಡಿದ್ದಾರೆ. ಭತ್ತಕ್ಕೆ ಯಾವ್ಯಾವ ರೋಗಗಳು ಬರುತ್ತವೆ, ಅದರ ಹೊಟ್ಟೆಯಿಂದ ಗರ್ಭ ಕಡೆಯಬೇಕಾದರೆ ಎಷ್ಟು ಕಷ್ಟವಾಗುತ್ತದೆ, ಯಾವ ತರಹ ಹಾಲು ಬರುತ್ತದೆಂದೂ ಗೊತ್ತಿಲ್ಲ. ಹಾಲು ಎಲ್ಲಿಂದ ಬರುತ್ತದೆಂದರೆ ಡೈರಿಯಿಂದ ಬರುತ್ತದೆನ್ನುತ್ತಾರೆ. ಕೆಲವರಿಗೆ ಎಮ್ಮೆಯಿಂದ ಹಾಲನ್ನು ಹೇಗೆ ಕರೆಯುವುದೆಂದು ಗೊತ್ತಿಲ್ಲ. ಈ ತರಹ ವಾಸ್ತವಕ್ಕೆ ದೂರವಾಗಿರುವ ಶಿಕ್ಷಣ ಕೊಟ್ಟು 'ನೀವು ಈ ದೇಶದ ಆಡಳಿತ ನಡೆಸಿ' ಎಂದರೆ ಹೇಗೆ ನಡೆಸುತ್ತಾರೆ? ಅವರಿಗೇನು ಗೊತ್ತಿದೆ? ಅವರಿಗೆ ಐಎಎಸ್ ಪಟ್ಟ ಕಟ್ಟಿ ಹವಾ ನಿಯಂತ್ರಿತ ಕೊಠಡಿಯಲ್ಲಿ ಕೂರಿಸಿ 'ಸಮಾಜದಲ್ಲಿರುವ ಎಲ್ಲಾ ಸಮಸ್ಯೆಯನ್ನು ಬಗೆಹರಿಸಿ' ಎಂದು ಅವರಿಗೆ ಅಧಿಕಾರ ಕೊಟ್ಟರೆ ಏನು ಮಾಡಬೇಕು? ಹಂಡ ಕುಡಿದು ರೇಷ್ಮೆ ಸೊಪ್ಪು ಕತ್ತರಿಸುವ ಚಾಕು ತೆಗೆದುಕೊಂಡು ಇರಿದರಲ್ಲಾ, ಇದು ಆ ಸ್ಥಿತಿಯಂತಾಗುತ್ತದಷ್ಟೆ. ಆದುದರಿಂದ, ಜನತಾ ನ್ಯಾಯಾಲಯವನ್ನು ಏಕೆ ಸ್ಥಾಪಿಸಲಿಲ್ಲವೆಂಬ ಬಗ್ಗೆ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ನಾಣಯ್ಯನವರು ಹೇಳಬೇಕು. ನನಗಂತೂ ಕಾನೂನಿನ ಬಗ್ಗೆ ಅಂತಹ ತಿಳಿವಳಿಕೆಯೇನೂ ಇಲ್ಲ. ಕಾನೂನು ಎಂದರೆ ಅದು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿ ಜನರು ಒಬ್ಬರಿಗೊಬ್ಬರು ಪರಸ್ಪರ

ವಿಶ್ವಾಸದಿಂದ ಬದುಕುವಂತಾದ್ದು. ಸಮಸ್ಯೆ ಎಲ್ಲಾ ಕಡೆಯೂ ಬರುತ್ತದೆ. ಒಂದು ತಿಂಗಳಿಗೆ ಇಪ್ಪತ್ತು ಪ್ರಕರಣಗಳನ್ನು ಇತ್ಯರ್ಥಗೊಳಿಸದೇ ಹೋದಲ್ಲಿ ಸುಮಾರು 10ರಿಂದ 12 ಸಾವಿರದಷ್ಟು ಪ್ರಕರಣಗಳು ನ್ಯಾಯಾಲಯಕ್ಕೆ ಬರುತ್ತವೆ. ಮೊನ್ನೆ ದಿವಸ ಸಚಿವರು ಮಾತನಾಡುತ್ತಾ ಲಕ್ಷಾಂತರ ಪ್ರಕರಣಗಳು ಕೋರ್ಟಿನಲ್ಲಿದೆಯೆಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ಇನ್ನು ಕೃಷಿ ಕ್ಷೇತ್ರದಲ್ಲಿನ ಕಬ್ಬು ಬೆಳೆ ವಿಚಾರವಾಗಿ ಹೇಳುವುದಾದರೆ, ಕಬ್ಬು ಬೆಳೆದಿರುವವರು ಅಳುತ್ತಿದ್ದರೆ ಸಕ್ಕರೆ ಮಂತ್ರಿಗಳು ಮಾತ್ರ ಯಾವಾಗಲೂ ನಗುತ್ತಿರುತ್ತಾರೆ, ಏನು ಸಮಾಚಾರ? ಇಡೀ ದೇಶಾದ್ಯಂತ 450 ಸಕ್ಕರೆ ಕಾರ್ಖಾನೆಗಳಿದ್ದು, 45 ಮಿಲಿಯನ್‌ನಷ್ಟು ಕಬ್ಬು ಬೆಳೆಯುವ ರೈತರಿದ್ದಾರೆ. ಇವರುಗಳು ಇವ್ವೊತ್ತು ನಾಶವಾಗುವಂಥ ಪರಿಸ್ಥಿತಿ ಸೃಷ್ಟಿಯಾಗಿದ್ದು, ಈ ಕುರಿತು ಏನು ಮಾಡಿದ್ದೀರಿ? ತಾವು ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ತಮ್ಮ ಗಮನಕ್ಕೆ ತರುವುದಾದರೆ, ಪಾಕಿಸ್ತಾನದಿಂದ ನಾವು 3.3 ಲಕ್ಷ ಟನ್ ಸಕ್ಕರೆಯನ್ನು ಆಮದಾಗಿ ತರಿಸಿಕೊಳ್ಳುತ್ತಿದ್ದೇವೆ. ಅದೇ ರೀತಿ ಈಸ್ಟನ್ ಯುನೈಟೆಡ್ ಕಂಟ್ರಿಗಳಿಂದ 2.2 ಲಕ್ಷ ಟನ್, ಬ್ರೆಜಿಲ್‌ನಿಂದ 2.2 ಲಕ್ಷ ಟನ್, ಥಾಯ್ಲೆಂಡ್‌ನಿಂದ 80 ಲಕ್ಷ ಟನ್ ಮತ್ತು ಮೆಕ್ಸಿಕೋದಿಂದ 1.3 ಲಕ್ಷ ಟನ್, ಒಟ್ಟು 9 ಲಕ್ಷ 80 ಸಾವಿರ ಟನ್‌ಗಳಷ್ಟು ಸಕ್ಕರೆಯನ್ನು ನಾವು ಹೊರದೇಶಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಹೊರದೇಶಗಳಿಂದ ನಮ್ಮ ದೇಶಕ್ಕೆ ಸಕ್ಕರೆ ಕಳುಹಿಸಿದರೆ ಆ ದೇಶಗಳು ಎಷ್ಟು ಸಬ್ಸಿಡಿ ಕೊಟ್ಟಿವೆಯೆಂದರೆ, ಪಾಕಿಸ್ತಾನದಿಂದ ಒಂದು ಟನ್ ಸಕ್ಕರೆಯನ್ನು ನಮ್ಮ ದೇಶಕ್ಕೆ ಕಳುಹಿಸಿದರೆ ಸುಮಾರು ರೂ.4,000 ಸಬ್ಸಿಡಿ, ಅದೇ ರೀತಿ ಈಸ್ಟನ್ ಯುನೈಟೆಡ್ ಕಂಟ್ರೀಸ್ ಒಂದು ಟನ್ ಸಕ್ಕರೆಯನ್ನು ಹೊರದೇಶಗಳಿಗೆ ಕಳುಹಿಸಿದರೆ ರೂ.23,000 ಸಬ್ಸಿಡಿ, ಬ್ರೆಜಿಲ್ ರೂ.3,000 ಸಬ್ಸಿಡಿ, ಥಾಯ್ಲೆಂಡ್ ರೂ.4,000 ಸಬ್ಸಿಡಿ ಮತ್ತು ಮೆಕ್ಸಿಕೊ ರೂ.6,000 ಸಬ್ಸಿಡಿ. ಪ್ರಪಂಚದಲ್ಲಿಯೇ ಅತ್ಯಂತ ಕಡಿಮೆ ಬೆಲೆಗೆ ಸಕ್ಕರೆ ಕೊಡುವಂಥ ದೇಶ ನಮ್ಮದಾಗಿದ್ದು, ಒಂದು ಕೆ.ಜಿ.ಗೆ ರೂ.13.50 ಪೈಸೆ, ಇಲ್ಲವೇ ರೂ.14.00ಗೆ ಸಕ್ಕರೆ ಕೊಡುತ್ತೇವೆ. ಅತಿ ಹೆಚ್ಚು ದರವಿರುವುದು ಬ್ರೆಜಿಲ್‌ನಲ್ಲಿ ಅಲ್ಲಿ ರೂ.68.00 ಇದ್ದರೆ, ಬಾಂಗ್ಲಾದೇಶದಲ್ಲಿ ರೂ.17.50 ಪೈಸೆ. ಇವ್ವೊತ್ತು ಬಳಕೆದಾರರ ಪ್ರಶ್ನೆ ಜಾಸ್ತಿಯಿಲ್ಲ, ಬಳಕೆದಾರರು ಒಂದು ಕೆ.ಜಿ.ಸಕ್ಕರೆಗೆ ಮೂರು ರೂಪಾಯಿಗಳನ್ನು ಜಾಸ್ತಿ ಕೊಟ್ಟರೆ ಕೆ.ಜಿ.ಗೆ ಹದಿನೈದು ರೂಪಾಯಿಗಳಾಯಿತು. ಬಳಕೆದಾರರು ಒಂದು ಕೆ.ಜಿ.ಸಕ್ಕರೆಗೆ ಐವತ್ತು ಪೈಸೆಯಷ್ಟು ಜಾಸ್ತಿಯಾಗಿ ಕೊಟ್ಟರೆ ಇಡೀ ಸಕ್ಕರೆ ಕಾರ್ಖಾನೆ ಹಾಗೂ ಕಬ್ಬು ಬೆಳೆಗಾರರು ಬದುಕಲು ಸಾಧ್ಯವಾಗುತ್ತದೆ.

ಶ್ರೀ ಉಮೇಶ್.ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಓ.ಜಿ.ಎಲ್(ಓಪನ್ ಜನರಲ್ ಲೈಸೆನ್ಸ್)ನಿಂದ ಹೊರದೇಶಗಳಿಂದ ನಮ್ಮ ದೇಶಕ್ಕೆ ಏನು ಸಕ್ಕರೆ ಆಮದಾಗಿ ಬರುತ್ತಿದೆ, ಇದು ನನ್ನ ಗಮನಕ್ಕೆ ಬಂದ ತಕ್ಷಣವೇ ಎರಡು ತಿಂಗಳ ಹಿಂದೆ ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೃಷಿ ಸಚಿವರಿಗೆ ಪತ್ರ ಬರೆದು ಹೊರದೇಶದಿಂದ

ಬರುತ್ತಿರುವ ಸಕ್ಕರೆಯನ್ನು ಕೂಡಲೇ ಬಂದ್ ಮಾಡಬೇಕು ಇಲ್ಲವೇ ಲೆವಿ ಫಿಕ್ಸ್ ಮಾಡಬೇಕು ಇಲ್ಲವೇ ತೆರಿಗೆಯನ್ನು ಹೆಚ್ಚು ಮಾಡಿ ನಮ್ಮ ದೇಶದ ಮಾರುಕಟ್ಟೆ ದರಕ್ಕೆ ಹೋಲಿಸಬೇಕೆಂದು ಹೇಳಿದ್ದೇನೆ. ನಾನೇ ಸ್ವತಃ ಕೇಂದ್ರದ ವಾಣಿಜ್ಯ ಮಂತ್ರಿಗಳ ಮನೆಗೆ ಹೋಗಿ ಅವರನ್ನು ಭೇಟಿ ಮಾಡಿ ವಿಷಯವನ್ನು ಅವರ ಗಮನಕ್ಕೆ ತಂದು ಈ ಕುರಿತು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಹೇಳಿ ಬಂದಿರುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ತಾವು ಕೇಂದ್ರದ ಮಂತ್ರಿಗಳನ್ನು ಭೇಟಿ ಮಾಡಿ ಏನೂ ಪ್ರಯೋಜನವಿಲ್ಲ. ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳು ಸೇರಿಕೊಂಡು ಒಂದು ಸಭೆ ನಡೆಸಬೇಕು. ದೇಶಾದ್ಯಂತ ಇರುವ 450 ಸಕ್ಕರೆ ಕಾರ್ಖಾನೆಗಳು ಮುಚ್ಚಿಹೋದರೆ ಏನು ಮಾಡುತ್ತೀರಿ? ಹೊರ ದೇಶಗಳಿಂದ ಸಕ್ಕರೆಯನ್ನು ತರಿಸಿಕೊಳ್ಳಲಾಗುತ್ತಿದೆಯೆಂದು ತಾವು ಹೇಳಿದಿರಿ. ನಮ್ಮ ರಾಜ್ಯದಲ್ಲಿ ಮೊಲ್ಯಾಸಿಸ್ ಎಷ್ಟಿದೆ? ನಮಗೆ ಎಷ್ಟು ಬೇಕೋ ಅಷ್ಟು ಇಟ್ಟುಕೊಂಡು ಜಾಸ್ತಿಯಾಗಿರುವುದನ್ನು ಹೊರ ರಾಜ್ಯಗಳಿಗೆ ಕಳುಹಿಸುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಸುಮಾರು 1 ಲಕ್ಷ 55 ಸಾವಿರ ಟನ್‌ಗಳಷ್ಟು ಮೊಲ್ಯಾಸಸ್ ಅನ್ನು ಶೇಖರಿಸಬಹುದು. ಆದರೆ, ನಮಗೆ ಅಗತ್ಯವಾಗಿ ಬೇಕಾಗಿರುವುದು ಮೂರೂವರೆ ಲಕ್ಷ ಲೀಟರ್‌ಗಳಷ್ಟು ಮಾತ್ರ. ಇವೊತ್ತು ಮೊಲ್ಯಾಸಸ್ ಬೆಲೆ ಇನ್ನೂರು ರೂಪಾಯಿಗಳಾಗಿದೆ. ಅದರಿಂದ ತಯಾರಿಸುವಂಥ ಮದ್ಯದ ಬೆಲೆ ಎಷ್ಟಾಗಿದೆ? ಮದ್ಯದ ದರ ಜಾಸ್ತಿ. ರೂ. 1,200ಗಳಿಂದ 2,000ಗಳಷ್ಟಿದ್ದ ಮೊಲ್ಯಾಸಸ್ ಬೆಲೆ ಇವೊತ್ತು ಒಂದು ಟನ್‌ಗೆ ರೂ.200 ಆಗಿದೆ. ವಿದೇಶದಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಕರ್ನಾಟಕದಲ್ಲಿ ಕಬ್ಬು ಇಳುವರಿ ಜಾಸ್ತಿ ಬಂದಿದ್ದು, ಸುಮಾರು 18-19 ತಿಂಗಳುಗಳಿಂದಲೂ ಹೆಚ್ಚುವರಿಯಾಗಿರುವ ಕಬ್ಬನ್ನು ಸಾಗಿಸುವುದಕ್ಕೆ ಯಾವುದೇ ವ್ಯವಸ್ಥೆಯಾಗಿಲ್ಲ. ಅಲ್ಲದೆ, ರೈತರುಗಳಿಗೆ ಸಾಗಾಣಿಕೆಯ ಹಳೆಯ ಬಾಕಿ ಕೊಡಬೇಕು. ಯಾವುದೇ ಹೈ ಪವರ್ ಕಮಿಟಿ ಇಲ್ಲವೇ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆ ಕರೆದು ಇಡೀ ಸಕ್ಕರೆ ಕಾರ್ಖಾನೆಗಳ ಮಾಲೀಕರುಗಳೊಂದಿಗೆ ಚರ್ಚಿಸಿ ಎಲ್ಲೆಲ್ಲಿ ಕಬ್ಬು ಹೆಚ್ಚುವರಿಯಾಗಿ ಉತ್ಪಾದನೆಯಾಗಿದೆ ಕಡಿಮೆ ಉತ್ಪಾದನೆ ಎಲ್ಲಿ ಆಗಿದೆ? ಯಾವ ರೀತಿ ಡೈವರ್ಶನ್ ಮಾಡಬೇಕು ಎಂಬುದರ ಬಗ್ಗೆಯಾದರೂ ಮಾಸ್ಟರ್ ಪ್ಲಾನ್ ಬೇಡವೇ?

8.10 ಪಿಎಂ

ಸನ್ಮಾನ್ಯ ಅಧ್ಯಕ್ಷರೆ, ಇಂದು ಮತದಾರರಿಗೆ ಶಾಸಕರುಗಳು ಅಥವಾ ಮಂತ್ರಿಗಳು ಸರಿಯಾಗಿ ಮಾಡಬೇಕಾದ ಕೆಲಸವನ್ನೂ ಮಾಡದೇ ಬೇಜವಾಬ್ದಾರಿಯಿಂದ ವರ್ತಿಸತಕ್ಕಂಥ ಪ್ರವೃತ್ತಿಯನ್ನು ಅನುಸರಿಸಿದಾಗ ಅಂಥ ಶಾಸಕರನ್ನು ಅಥವಾ ಮಂತ್ರಿಗಳನ್ನು ವಾಪಸ್ಸು ಕರೆಸಿಕೊಳ್ಳತಕ್ಕಂಥ ಸಾಮರ್ಥ್ಯವಿದ್ದಿದ್ದರೆ ಅಂಥ ಸಮಯದಲ್ಲಿ ಜವಾಬ್ದಾರಿಯಿಂದ ಮಂತ್ರಿಗಳು ಕೆಲಸ ಮಾಡುತ್ತಿದ್ದರು. ಆದರೆ ಆ ಶಕ್ತಿ ಮತದಾರರಿಗೆ

ಇಲ್ಲವಾಗಿದೆ. ಈಗಾಗಲೇ 18 ತಿಂಗಳುಗಳು ಕಳೆದುಹೋಯಿತು. ನಿಮಗೆ ಗೊತ್ತಿರುವುದು ಅಕ್ಟೋಬರ್-ನವೆಂಬರ್ ತಿಂಗಳಿನದು, ನಮಗೆ ಗೊತ್ತಿರುವುದು ಜೂನ್, ಜುಲೈ, ಆಗಸ್ಟ್ ತಿಂಗಳ ಕೃಷಿ, ಇನ್ನೊಂದು ಕಡೆ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಕೃಷಿ. ಈಗ ಏನಾಗಿದೆಯೆಂದರೆ ಆ ಮೂರು ಭಾಗದ ಜನರಿಗೂ ಮೂವರು ಮಂತ್ರಿಗಳನ್ನು ಮಾಡಬೇಕಾಗಿದೆ. ಜೂನ್, ಜುಲೈ, ಆಗಸ್ಟ್ ತಿಂಗಳುಗಳಿಗೆ ಒಬ್ಬ ಮಂತ್ರಿ, ಅಕ್ಟೋಬರ್-ನವೆಂಬರ್ ತಿಂಗಳಿಗೆ ಒಬ್ಬ ಮಂತ್ರಿ ಹಾಗೂ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಿಗೆ ಒಬ್ಬ ಮಂತ್ರಿ. ಹೀಗೆ ಮೂವರು ಮಂತ್ರಿಗಳನ್ನು ಮಾಡಿದರೆ ಆಗ ಕಬ್ಬು ಸಾಗಾಣಿಕೆ ಸರಿಯಾಗುತ್ತದೆ ಎಂದು ಕಾಣುತ್ತದೆ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇಲ್ಲಿಯವರೆಗೂ ಏನು ಮಾಡುತ್ತಿದ್ದಿರಿ? ಒಂದು ಮೀಟಿಂಗ್ ಇದರ ಸಲುವಾಗಿ ಕರೆದು ಕಬ್ಬನ್ನು ಡೈವರ್ಶನ್ ಮಾಡುವುದಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ?

ಶ್ರೀ ಉಮೇಶ್.ವಿ.ಕತ್ತಿ: ಅದಕ್ಕೆ ಎಲ್ಲರ ಒಪ್ಪಿಗೆ ಬೇಕಲ್ಲವೇ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಎಲ್ಲರೂ ಒಪ್ಪಿಗೆ ಕೊಡುವುದಕ್ಕೆ ರೆಡಿ ಇದ್ದಾರೆ. ನೀವು ಅದರ ಬಗ್ಗೆ ಚರ್ಚೆ ಮಾಡಲು ಮಾರ್ಚ್‌ನಲ್ಲಿ ಒಂದು ಮೀಟಿಂಗ್ ಕರೆದಿದ್ದೀರಾ? ನೀವು ಮೀಟಿಂಗ್ ಕರೆದಿಲ್ಲ.

ಅಧ್ಯಕ್ಷರು: ಪುಟ್ಟಣ್ಣಯ್ಯನವರೆ, ಮಂತ್ರಿಗಳು ವಿವರಣೆ ಕೊಟ್ಟಮೇಲೆ ನಿಮ್ಮ ಅಭಿಪ್ರಾಯವೇನು? ಓ.ಜಿ.ಎಲ್.ನಲ್ಲಿ ಶುಗರ್ ಇನ್‌ಕ್ಲೂಡ್ ಮಾಡಿರುವುದರಿಂದ ಶುಗರ್ ಇಂಪೋರ್ಟ್ ಮಾಡುತ್ತಿದ್ದಾರೆ, ಆದರೆ ನಮ್ಮಲ್ಲಿಯೇ ಸಾಕಷ್ಟು ಸಕ್ಕರೆಯನ್ನು ಉತ್ಪಾದನೆ ಮಾಡುತ್ತಿದ್ದೇವೆಯಾದ ಕಾರಣ ಈಗಲೂ ನಮ್ಮಲ್ಲಿ ಸಾಕಷ್ಟು ಸಕ್ಕರೆ ಇರುವುದರಿಂದ ಮತ್ತೆ ಇಂಪೋರ್ಟ್ ಮಾಡಿಕೊಂಡರೆ ನಮ್ಮ ರೈತರುಗಳಿಗೆ ತೊಂದರೆಯಾಗುತ್ತದೆ ಎಂಬುದೇ ನಿಮ್ಮ ಅಭಿಪ್ರಾಯವಲ್ಲವೇ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಹೌದು.

ಅಧ್ಯಕ್ಷರು: ಶಿರ ಘಟನೆಗೆ ಸಂಬಂಧಪಟ್ಟ ಹಾಗೆ ಎಡಿಬಲ್ ಆಯಿಲ್ ಸೀಡ್ಸ್‌ಗೆ ನೀವು ಹೇಗೆ ಹೇಳಿದಿರೋ ಅದೇ ರೀತಿಯಲ್ಲಿ ನೀವು ಇದಕ್ಕೂ ಕೂಡ ಸ್ಪೆಸಿಫೈ ಮಾಡಿ ಹೇಳಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಅದೇ ರೀತಿ ಇದು. ಓ.ಜಿ.ಎಲ್. ಏಚಾರ.

ಅಧ್ಯಕ್ಷರು: ಓ.ಜಿ.ಎಲ್. ಇವರಿಗೆಲ್ಲಿ ಬರುತ್ತದೆ? ಕೇಂದ್ರಕ್ಕೆ ತಾನೇ ಬರುವುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನಾನು ಅದನ್ನಲ್ಲ ಹೇಳುತ್ತಿದ್ದುದು. ಈ ರೀತಿಯಲ್ಲಿ ಶುಗರ್ ಇಂಪೋರ್ಟ್ ಮಾಡಿಕೊಂಡು ಇಡೀ ದೇಶಕ್ಕೆ ಆಪತ್ತು ಬರುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳು ಒಂದು ಕಡೆ ಸೇರಿ ಇದರ ಬಗ್ಗೆ ಏನು ಮಾಡಬೇಕು ಎಂದು ಚರ್ಚೆ ಮಾಡಬೇಕು. ಏಕೆಂದರೆ ಇನ್ನು ಮೂರು ವರ್ಷದೊಳಗೆ ನಾವು 2 ಕೋಟಿ 10 ಲಕ್ಷ ಟನ್ ಸಕ್ಕರೆಯನ್ನು ಉತ್ಪಾದನೆ ಮಾಡುತ್ತೇವೆ. ನಮಗೆ ಕೇವಲ 1 ಕೋಟಿ 60 ಲಕ್ಷ ಟನ್ ಸಕ್ಕರೆ ಬಳಕೆಗೆ ಸಾಕು. ಆಗ ಇನ್ನೂ 50 ಲಕ್ಷ ಟನ್ ಸಕ್ಕರೆ ಉಳಿದುಕೊಳ್ಳುತ್ತದೆ. ಹೀಗಿರುವಾಗ ಇವರು ಮತ್ತೆ 10 ಲಕ್ಷ ಟನ್ ಇಂಪೋರ್ಟ್ ಮಾಡಿಕೊಂಡರೆ ಹೇಗೆ? ಓ.ಜಿ.ಎಲ್.ಗೆ ಶುಗರ್ ಕೂಡ ಸೇರಿದೆ. ಆದುದರಿಂದ ನೀವು ಕೇಂದ್ರ ಸರ್ಕಾರದ ಮೇಲೆ ಫೈಟ್ ಮಾಡಬೇಕಾದರೆ ಅದನ್ನು ಹೇಗೆ ಮಾಡುತ್ತೀರಿ?

ಅಧ್ಯಕ್ಷರು: ಅದನ್ನು ನೀವು ಇಬ್ಬರಿಗೂ ಹೇಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇದರ ಬಗ್ಗೆ ಹೋರಾಟ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಹೇಳಬೇಕಾಗಿದೆ.

ಅಧ್ಯಕ್ಷರು: ರಾಜ್ಯ ಸರ್ಕಾರದವರಾದ ಇವರಿಗೆ ಹೋರಾಟ ಮಾಡುವುದಕ್ಕೆ ಹೇಳಿ ಬಿ.ಜೆ.ಪಿ.ಯವರಿಗೆ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವ ಸಲುವಾಗಿ ಹೇಳಿ.

ಡಾ:ಎಂ.ಪಿ.ಕರ್ಕಿ: ಅದಕ್ಕಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರಸರ್ಕಾರವಿರುವಾಗ ನಮ್ಮನ್ನು ವಿನಂತಿ ಮಾಡಿಕೊಂಡರೆ ಏನು ಪ್ರಯೋಜನ?

ಅಧ್ಯಕ್ಷರು: ನೀವು ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳಲಿ ಎಂದು ಹೇಳಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕೇಂದ್ರ ಸರ್ಕಾರದಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಕ್ಯಾಬಿನೆಟ್ ದರ್ಜೆ ಮಂತ್ರಿಯನ್ನು ಇನ್ನೂ ಮಾಡಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಕೃಷಿಗೆ ಕೇಂದ್ರ ಸರ್ಕಾರದಲ್ಲಿ ಬಹಳ ಇಂಪಾರ್ಟೆನ್ಸ್ ಕೊಡಲಾಗಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಯಾವ ರೀತಿ ಇಂಪಾರ್ಟೆನ್ಸ್ ಕೊಟ್ಟಿದ್ದೀರಿ?

ಡಾ: ಎಂ.ಪಿ.ಕರ್ಕಿ: ಜ್ಞಾನೇಂದ್ರರವರೆ, ಪುಟ್ಟಣ್ಣಯ್ಯನವರು ಈಗ ರಾಜ್ಯ ಸರ್ಕಾರದವರಿಗೆ ಶುಗರ್ ಬಗ್ಗೆ ಹೇಳುತ್ತಿದ್ದಾರೆ. ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಒಂದು ರೆಪ್ರೆಸೆಂಟೇಷನ್ ಕಳುಹಿಸಲಿ. ಕೇಂದ್ರ ಸರ್ಕಾರ ಆಗ ಏನು ಮಾಡುತ್ತದೆ ಎಂಬುದನ್ನು ನೋಡೋಣ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: 1991ನೇ ಇಸವಿಯಲ್ಲಿಯೇ ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಲಾಗಿದೆ. ಅದನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಲಾಗುತ್ತಿದೆ. ಗ್ಯಾಟ್ ಒಪ್ಪಂದಕ್ಕೆ ಸಹಿ ಮಾಡಿದ ಮೇಲೆ ಎಣ್ಣೆಯ ಮೇಲಿದ್ದ ಸುಂಕ 65 ಪರ್ಸೆಂಟ್‌ಗೆ ಬಂತು. ದೇವೇಗೌಡರು ಪ್ರಧಾನಮಂತ್ರಿಗಳಾದ ಮೇಲೆ ಅದು 30 ಪರ್ಸೆಂಟ್‌ಗೆ ಬಂತು. ಆಮೇಲೆ ಈಗ ವಾಜಪೇಯಿಯವರ ಸರ್ಕಾರ ಬಂದಮೇಲೆ ಇದು 20 ಪರ್ಸೆಂಟ್‌ಗೆ ಬಂತು.

ಶ್ರೀಮತಿ ಬಿ.ಟಿ.ಲಲಿತಾನಾಯಕ್: ಮಾನ್ಯ ಅಧ್ಯಕ್ಷರೆ, ಕೇಂದ್ರದಲ್ಲಿ ರೈತರ ಬಗ್ಗೆ ಮಾತನಾಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆಧ್ವಾನಿಯವರಿಗಾಗಲಿ ಅಥವಾ ಬೇರೆಯವರಿಗಾಗಲಿ ರೈತರ ಬಗ್ಗೆ ಸ್ವಲ್ಪವಾದರೂ ಗೊತ್ತಿದೆಯೆ?

ಅಧ್ಯಕ್ಷರು: ಅದನ್ನು ಹೇಗೆ ಹೇಳುವುದಕ್ಕಾಗುತ್ತದೆ?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಅಧ್ಯಕ್ಷರೆ, ಸಕ್ಕರೆ ಸ್ಟಾಕ್ ಬಗ್ಗೆ ಕೆಲವೊಂದು ಮಾಹಿತಿಯನ್ನು ಸದನಕ್ಕೆ ಕೊಡಲಿಚ್ಛಿಸುತ್ತೇನೆ. ಸುಮಾರು 60 ದಶಲಕ್ಷ ಟನ್ ಸಕ್ಕರೆ ಕಳೆದ ವರ್ಷದ್ದೇ ಬಾಕಿ ಉಳಿದಿದೆ. ಇನ್ನು ಈ ವರ್ಷದಲ್ಲಿ ಅಂದಾಜಿನಲ್ಲಿ ಹೇಳುವುದಾದರೆ 165 ದಶಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗುತ್ತದೆ. ನಮಗೆ ಬಳಕೆಗೆ ಬೇಕಾಗಿರುವುದು 135 ದಶಲಕ್ಷ ಟನ್ ಸಕ್ಕರೆ. ಈ ರೀತಿ ನಮ್ಮಲ್ಲಿಯೇ ಸಕ್ಕರೆ ದಾಸ್ತಾನಿದ್ದರೂ ಕೂಡ ಇನ್ನೂ ಹೆಚ್ಚಿನ ಸಕ್ಕರೆ ಓ.ಜಿ.ಎಲ್.ನಲ್ಲಿ ಬರುತ್ತಿದೆ.

ಅಧ್ಯಕ್ಷರು: ಇವೊತ್ತು ನೀವು ಸದನದಲ್ಲಿ ಹೇಳುತ್ತಾ ನಾನು ರಾಮಕೃಷ್ಣಹೆಗಡೆ ಮನೆಗೆ ಹೋಗಿ ಸಕ್ಕರೆ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಿದೆ ಎಂದಿರಿ. ಆ ವಿಷಯವನ್ನು ಪತ್ರಿಕೆಯ ಮುಖಾಂತರ ನೀವು ಜನತೆಗೆ ತಿಳಿಸುವ ಕೆಲಸ ಮಾಡಿದ್ದೀರಾ? ಇಂಥ ಸಾರ್ವಜನಿಕ ಮಹತ್ವವುಳ್ಳ ವಿಷಯ ಸಾರ್ವಜನಿಕರಿಗೆ ತಿಳಿಸಲು ಪತ್ರಿಕೆಯ ಮುಖಾಂತರ ನೀವು ತಿಳಿಸಬೇಕು. ನಮಗೇನೋ ನೀವು ರಾಮಕೃಷ್ಣಹೆಗಡೆ ಮನೆಗೆ ಹೋಗಿದ್ದು ಮತ್ತು ಸಕ್ಕರೆ ವಿಷಯವಾಗಿ ಮಾತನಾಡಿದ್ದು ಯಾವುದೂ ಗೊತ್ತಿಲ್ಲ. ಇವೊತ್ತೇ ನನಗೆ ಗೊತ್ತಾಗಿದ್ದು.

ಶ್ರೀ ಉಮೇಶ್ ವಿ.ಕತ್ತಿ: ಕೇಂದ್ರದಲ್ಲಿ ಈ ಒತ್ತಡ ತರಬೇಕೆಂದು ಹೆಗಡೆಯವರಿಗೆ ಹೇಳಿದ್ದೇನೆ.

ಅಧ್ಯಕ್ಷರು: ನೀವು ಅದನ್ನು ಜೋರಾಗಿ ಮಾತನಾಡಿ ಹೇಳಬೇಕು. ನಮ್ಮ ರೈತರಿಗೆ ಈ ರೀತಿಯಲ್ಲಿ ತೊಂದರೆಯಾಗಿ ಅನ್ಯಾಯವಾಗುತ್ತದೆ ಎಂದು ಹೇಳಿದರೆ ಅವರಿಗೂ ರೈತರ ಮೇಲೆ ಪ್ರೀತಿ ಇರುವುದರಿಂದ ಅವರೇ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಹೋಗಿದ್ದು ಓ.ಜಿ.ಎಲ್.ಬಗ್ಗೆ

ಮಾತನಾಡುವುದಕ್ಕಲ್ಲ. ಅವರು ಹೋಗಿದ್ದು ಜೆ.ಡಿ.ಎಲ್.ಪಿ. ಮೀಟಿಂಗ್ ಬಗ್ಗೆ.

ಅಧ್ಯಕ್ಷರು: ಅದೆಲ್ಲಾ ನನಗೆ ಗೊತ್ತಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ನಮಗೆ ಇಂಪೋರ್ಟ್‌ನಲ್ಲಿ ಬರುವ ಸಕ್ಕರೆ ಮಂಗಳೂರು ಬಂದರು, ಕೇರಳ ಹಾಗೂ ಪಶ್ಚಿಮ ಬಂಗಾಳ ಬಂದರುಗಳಿಗೆ ಬರುತ್ತಿರುವುದರಿಂದ ಕರ್ನಾಟಕ ರಾಜ್ಯದ ಸಕ್ಕರೆ ಉತ್ಪಾದಕರಿಗೆ ಹಾಗೂ ರೈತರುಗಳಿಗೆ ನೇರವಾಗಿ ಇದರಿಂದ ಪರಿಣಾಮ ಬೀರುತ್ತಿರುವುದು ಸ್ವಲ್ಪ ಮಟ್ಟಿಗೆ ನಿಜ. ಈ ರೀತಿಯಲ್ಲಿ ಇಂಪೋರ್ಟ್‌ನಲ್ಲಿ ಸಕ್ಕರೆ ಬರುವುದರಿಂದ ನಮ್ಮಲ್ಲಿ ಕಳೆದ ಎರಡ್ಮೂರು ತಿಂಗಳುಗಳಲ್ಲಿ ಸುಮಾರು 200 ರೂ.ಗಳಷ್ಟು ಸಕ್ಕರೆ ದರ ಕಡಿಮೆಯಾಗಿದೆ. ಈ ಸಕ್ಕರೆ ವಿಷಯವಾಗಿ ಮಾತನಾಡಲು ನಾನು ರಾಮಕೃಷ್ಣಹೆಗಡೆಯವರನ್ನು ಭೇಟಿಯಾಗಿದ್ದೆನೆ ವಿನಃ ಜೆ.ಡಿ.ಎಲ್.ಪಿ. ಮೀಟಿಂಗ್ ಬಗ್ಗೆ ಮಾತನಾಡಲು ಅಲ್ಲ. ಅವರು ನನ್ನ ಹಳೆ ಗುರುಗಳು. ಅದರ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆಯಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರು ಹಳೆ ಗುರುಗಳು ಎಂದು ಹೇಳಿಕೊಂಡು ಒಬ್ಬೊಬ್ಬರೇ ಇವರ ಕೈಬಿಟ್ಟರೆ ನಾಳೆ ಇವರ ಗತಿಯೇನು? ಕೊನೆಗೆ ರಾಜೇಂದ್ರನ್ ಹೇಳಿದ ಕಥೆಯ ಹಾಗೆ ಆಗುತ್ತದಷ್ಟೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಗ್ಯಾಟ್ ಒಪ್ಪಂದವಾದ ಮೇಲೆ ಮತ್ತೊಂದು ಅಪಾಯಕಾರಿಯಾದ ಸಂಗತಿಯೇನಾಗಿದೆಯೆಂದರೆ ದೇಶದಲ್ಲಿ ಟರ್ಮಿನೇಟೆಡ್ ಸೀಡ್ಸ್‌ನ್ನು ಇಂಟ್ರಡ್ಯೂಸ್ ಮಾಡಲಾಯಿತು. ಇದು ಇಡೀ ಭಾರತ ದೇಶದ ಬೀಜದ ವಂಶವಾಹಿನಿ ಗುಣವನ್ನು ನಾಶಪಡಿಸುವಂಥ ಒಂದು ಕೆಟ್ಟ ವ್ಯವಸ್ಥೆಯೇ ಇದಾಗಿದೆ. ಅದನ್ನು ಇಂಟ್ರಡ್ಯೂಸ್ ಮಾಡಿದರೆ ಇಡೀ ಬೀಜದ ಮೇಲಿನ ಸ್ವಾತಂತ್ರ್ಯವನ್ನು ನಾವು ಕಳೆದುಕೊಂಡ ಹಾಗೆ ಆಗುತ್ತದೆ. ಮೊನ್ನೆ ಬಿ.ಜೆ.ಪಿ.ಯವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಬೀಜದ ಮೇಲಿನ ಒಡೆತನದ ಸ್ವಾಮ್ಯದ ಪೇಟೆಂಟ್ ಕಾಯಿದೆಯನ್ನು ತಿದ್ದುಪಡಿ ಮಾಡಬೇಕು ಎಂದಿದ್ದಾರೆ. ಈಗ ಹಾಲಿ ಇರತಕ್ಕಂಥ ಪೇಟೆಂಟ್ ಕಾಯಿದೆಯನ್ನು ತಿದ್ದುಪಡಿ ಮಾಡಿದರೆ ಇಡೀ ಬೀಜದ ಸ್ವಾತಂತ್ರ್ಯವನ್ನು ನಾವು ಕಳೆದುಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ. ಟರ್ಮಿನೇಟೆಡ್ ಸೀಡ್ಸ್‌ನ್ನು ಒಂದು ಸಾರಿ ಭೂಮಿಗೆ ಬಿತ್ತಿದರೆ ಮತ್ತೊಮ್ಮೆ ಅದೇ ಬೀಜವನ್ನು ಬಿತ್ತುವುದಕ್ಕೆ ಬರುವುದಿಲ್ಲ. ಏಕೆಂದರೆ ಆ ಬೀಜ ಮೊಳಕೆ ಒಡೆಯುವ ಗುಣವನ್ನೇ ಕಳೆದುಕೊಳ್ಳುತ್ತದೆ. ಆಗ ನಾವು ಬೀಜಕ್ಕೆ ಮತ್ತೆ ಅವನ ಬಳಿಗೇ ಹೋಗಬೇಕು ಮತ್ತು ಅವನು ಹೇಳಿದ ಔಷಧಿಯನ್ನೇ ನಾವು ಸಿಂಪಡಣೆ ಮಾಡಬೇಕು. ಹೀಗಾಗಿ ಈಗಾಗಲೇ ನಾವು ಎಲ್ಲಾ ಬೀಜಗಳನ್ನು ಕಳೆದುಕೊಂಡಿದ್ದೇವೆ. ನಾಗೇಗೌಡರಿಗೆ ತಿಳಿದಿರುವ ಹಾಗೆ ಮಂಡ್ಯದ ಕಡೆ ಉಪಯೋಗಿಸುವ ದಡಗಾರ್, ರತ್ನಚೂಡಿ, ಬಂಗಾರಸಣ್ಣ, ಬಂಗಾರತಳಿ, ಈ ರೀತಿಯ ಇಡೀ ಬೀಜಗಳನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಈಗ

ನಾವು ನಮ್ಮ ಬೀಜವನ್ನು ಬಿತ್ತನೆ ಮಾಡಿದ್ದರೆ ನಮ್ಮ ಭೂಮಿಯ ಪಕ್ಕದಲ್ಲಿ ಟರ್ಮಿನೇಟೆಡ್ ಸೀಡ್ಸ್ ಹಾಕಿದಾಗ ಅದರಿಂದ ಸೋಂಕು ತಗಲಿದರೆ ನಾವು ಬಿತ್ತಿದ್ದ ಬೀಜಕ್ಕೂ ಅದೇ ಗುಣ ಬರುವ ಸಾಧ್ಯತೆಗಳಿವೆ. ಈ ರೀತಿಯಲ್ಲಿ ಇಂದು 'ಮಾನ್‌ಸೆಂಟೋ' ಹಾಗೂ 'ಕಾರ್ಗಿಲ್' ಕಂಪನಿಗಳು ಬೀಜದ ಸರಬರಾಜನ್ನು ಮಾಡಲು ತಯಾರಾಗಿವೆ. ಕಬ್ಬಿನ ಬಿತ್ತನೆ ಬೀಜಗಳನ್ನು ನಾವು ಸರಬರಾಜು ಮಾಡುತ್ತೇವೆ, ನಮಗೆ ಕಾಂಟ್ರ್ಯಾಕ್ಟ್ ಕೊಡಿ ಎಂದು 'ಮಾನ್‌ಸ್ಯಾಂಟೋ' ಕಂಪನಿಯವರು ಕೇಳಿದ್ದಾರೆ. ಈ ರೀತಿಯಾದರೆ ನಾವು ಇಡೀ ಬೀಜದ ಮೇಲಿನ ಸ್ವಾತಂತ್ರ್ಯವನ್ನು ಕಳೆದುಕೊಂಡಾಗ ನಾವೇನು ಮಾಡಲು ಸಾಧ್ಯವಾಗುತ್ತದೆ? ಮೊನ್ನೆ ನೀವೂ ಕೂಡ ಹೇಳಿದಿರಿ ಬೇವು ಮತ್ತು ಬಾಸುಮತಿ, ಅರಿಶಿನ ಬೀಜದ ಬಗ್ಗೆ ಹೇಳಿದಿರಿ. ಬಾಸುಮತಿಯನ್ನು ತೀಕ್ಷ್ಣಮತಿ ಎಂದು ಹೇಳಿದಿರಿ.

ಡಾ: ಎಂ.ಪಿ.ಕರ್ಕಿ: ಅಧ್ಯಕ್ಷರೆ, ಬಿ.ಜೆ.ಪಿ. ಸರ್ಕಾರ ಈ ದೇಶದ ರೈತರ ಹಿತರಕ್ಷಣೆಗೆ ಏನು ಮಾಡಬೇಕಾಗಿದೆಯೋ ಅದರ ಬಗ್ಗೆ ಚಿಂತನೆ ಮಾಡುತ್ತಿದೆ. ಟರ್ಮಿನೇಟೆಡ್ ಸೀಡ್ಸ್ ಬಗ್ಗೆಯೂ ವಿಚಾರ ಮಾಡಲಾಗುತ್ತಿದೆ ಎಂಬ ಬಗ್ಗೆ ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಆ ರೀತಿಯಲ್ಲಿ ಆಗಬಾರದು ಎನ್ನುವ ಉದ್ದೇಶದಿಂದ ಗ್ಯಾಟ್ ಒಪ್ಪಂದಕ್ಕೆ ತಿದ್ದುಪಡಿಯನ್ನು ತರಬೇಕೆಂದು ಚಿಂತನೆಯನ್ನು ಮಾಡುತ್ತಿದ್ದೇವೆ. ಈ ದೇಶದ ರೈತರ ವಿರುದ್ಧವಾಗಿ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಗ್ಯಾಟ್ ಒಪ್ಪಂದಕ್ಕೆ ಕಾಂಗ್ರೆಸ್ ಸರ್ಕಾರ, ಬಿ.ಜೆ.ಪಿ. ಸರ್ಕಾರ ಹಾಗೂ ಜನತಾ ದಳ ಸರ್ಕಾರ ಸಹಿ ಹಾಕಿ ಎಲ್ಲರನ್ನೂ ಅಪಾಯದ ಸ್ಥಿತಿಗೆ ಬರುವಂತೆ ಮಾಡಿದಿರಿ. ಕರ್ಕಿಯವರೇ, ತಾವು ಏನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ ಎಂಬುದನ್ನು ಹೇಳಿ. ಮಾನ್‌ಸೆಂಟೋ ಹಾಗೂ ಕಾರ್ಗಿಲ್ ಕಂಪನಿಗಳು ಈ ದೇಶದ ಒಳಗೆ ಬರದೇ ಇರುವ ಹಾಗೆ ನೀವು ಮಾಡುತ್ತೀರಾ? ಆ ರೀತಿ ಮಾಡುವುದಿದ್ದರೆ ಹೇಳಿ. ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಗ್ಯಾಟ್ ಒಪ್ಪಂದದಿಂದ ಹೊರಬಂದು ಎಲ್ಲಾ ನ್ಯೂನತೆಗಳನ್ನು ಸರಿಪಡಿಸುತ್ತದೆಂದು ಹೇಳುತ್ತೇನೆ.

ಡಾ: ಎಂ.ಪಿ.ಕರ್ಕಿ: ಮಾನ್ಯ ಅಧ್ಯಕ್ಷರೆ, ಗ್ಯಾಟ್ ಒಪ್ಪಂದದಿಂದ ಯಾವ ರೀತಿ ನುಣುಚಿಕೊಳ್ಳಬೇಕು, ಅದರಿಂದ ಯಾವ ರೀತಿ ಹೊರಕ್ಕೆ ಬರಬೇಕು ಎಂಬ ಯೋಚನೆ ಈಗ ಕೇಂದ್ರ ಸರ್ಕಾರದಲ್ಲಿ ಇದೆಯೆಂದು ಹೇಳತಕ್ಕಂಥದ್ದನ್ನು ನಾನು ಓದಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಆದರೆ ಓಜಿಎಲ್‌ನಲ್ಲಿ ಈಗಲೂ ಎಲ್ಲವೂ ಕಂಟಿನ್ಯೂ ಆಗಿ ನಡೆಯುತ್ತಿದೆ. ಓಜಿಎಲ್ ಎಂದರೆ ಅದು ಎಮರ್ಜೆನ್ಸಿಗೆ ಮಾತ್ರ ಬೇಕಾಗಿರುವಂಥದ್ದು. ಈಗ ನಮ್ಮ ದೇಶದಲ್ಲಿ ಎಣ್ಣೆಗೆ ಬಹಳ ಅಭಾವ ಬಂದಾಗ ಆಗ ಎಮರ್ಜೆನ್ಸಿಗೇಟ್ ಓಪನ್ ಮಾಡಿಕೊಳ್ಳುವಂಥದ್ದು. ಆದರೆ ನಮ್ಮ ದೇಶದಲ್ಲಿಯೇ ಸಾಕಾಗುವಷ್ಟು ಎಣ್ಣೆಕಾಳುಗಳು ಉತ್ಪಾದನೆ ಆಗುವಾಗ ಓಜಿಎಲ್ ಅನ್ನು ಓಪನ್

ಮಾಡುತ್ತೇವೆಂದರೆ ಅದರ ಅರ್ಥ ಏನು?

ಅಧ್ಯಕ್ಷರು: ಡಾ: ಕರ್ಕಿಯವರೆ, ಮಾನ್ಯ ಪುಟ್ಟಣ್ಣಯ್ಯನವರು ವಿವರವಾಗಿ ಹೇಳುತ್ತಿಲ್ಲ. ಯಾವ ಪದಾರ್ಥ ನಮ್ಮ ದೇಶದಲ್ಲಿಯೇ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುತ್ತಿದ್ದರೂ ಸಹ ಅಂಥ ಪದಾರ್ಥಗಳನ್ನು ಪರದೇಶಗಳಿಂದ ನಾವು ಆಮದು ಮಾಡಿಕೊಂಡಾಗ ಅದು ದೇಶದ ಹಿತದೃಷ್ಟಿಯಿಂದ ಆಮದು ಮಾಡಿಕೊಂಡಿದ್ದಲ್ಲ, ಅದು ವಾಣಿಜ್ಯದ ದೃಷ್ಟಿಯಿಂದ, ವಾಣಿಜ್ಯೋದ್ಯಮಿಗಳ ಒತ್ತಡಕ್ಕೆ ಮಣಿದು ಮಾಡತಕ್ಕಂಥ ಕೆಲಸವಾಗುತ್ತದೆ ಎನ್ನುವ ಅಭಿಪ್ರಾಯ ಬರುತ್ತದೆ ಇದು ಆಗಬಾರದು ಎಂದು ಮಾನ್ಯ ಪುಟ್ಟಣ್ಣಯ್ಯನವರು ಹೇಳಿರುವಂಥದ್ದು.

ಡಾ: ಎಂ.ಪಿ.ಕರ್ಕಿ: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರಕ್ಕೆ ಕರ್ನಾಟಕದ ಹಿತದೃಷ್ಟಿಯನ್ನು ಮಾತ್ರ ನೋಡಿಕೊಂಡರೆ ಸಾಲದು, ಅದು ಇಡೀ ದೇಶದ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಾಗುತ್ತದೆ. ನನಗೆ ಗೊತ್ತಿದ್ದ ಹಾಗೆ ಗುಜರಾತ್ ರಾಜ್ಯದಲ್ಲಿ ಶೇಂಗಾ ಬೀಜ ಬಹಳವಾಗಿ ಹಾಳಾದ್ದರಿಂದ ಅದರ ಪೂರೈಕೆ ಕಡಿಮೆಯಾಗಿ ಈ ರೀತಿ ಮಾಡಿದ್ದಾರೆಂದು ನನ್ನ ಅನಿಸಿಕೆಯಾಗಿದೆ. ಇದು ಇಡೀ ಭಾರತ ದೇಶವನ್ನು ಗಮನದಲ್ಲಿಟ್ಟುಕೊಂಡು ಮಾಡಿರುವ ಯೋಜನೆಯಾಗಿದೆ. ಕರ್ನಾಟಕದ ಹಿತವನ್ನು ಮಾತ್ರ ನೋಡಿಕೊಂಡು ದೇಶವನ್ನು ಆಳುವುದಕ್ಕೆ ಆಗುವುದಿಲ್ಲ. ಕರ್ನಾಟಕದಲ್ಲಿ ಶೇಂಗಾಬೀಜ ಜಾಸ್ತಿ ಇರಬಹುದು. ಆದರೆ ಇಡೀ ಭಾರತದೇಶದಲ್ಲಿ ಜಾಸ್ತಿ ಶೇಂಗಾ ಬೀಜ ಇದೆಯೇ ಎಂಬುದನ್ನು ನೋಡಬೇಕಾಗುತ್ತದೆ.

ಅಧ್ಯಕ್ಷರು: ಭಾರತ ದೇಶದ ನೀತಿಯನ್ನು ಕರ್ನಾಟಕವನ್ನು ಅನುಸರಿಸಿ ಮಾಡುವುದಕ್ಕಾಗುವುದಿಲ್ಲ. ನಾನು ಹೇಳುತ್ತಿರುವಂಥದ್ದು ಏನೆಂದರೆ ಭಾರತ ದೇಶದಲ್ಲಿ ಒಟ್ಟು ಉತ್ಪಾದನೆಯನ್ನು ಗಮನದಲ್ಲಿಟ್ಟುಕೊಂಡು ಒಂದು ನೀತಿಯನ್ನು ಮಾಡುವಂಥದ್ದು ಒಳ್ಳೆಯದು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಅದು ಒಂದೇ ಅಲ್ಲ, ಶ್ರೀ ಸಾಮ್‌ಪೆಟ್ರೋಡ ಅವರು ದಿವಂಗತ ಶ್ರೀ ರಾಜೀವ್‌ಗಾಂಧಿಯವರ ಸಲಹೆಗಾರರಾಗಿ ಬಂದಂಥ ಸಂದರ್ಭದಲ್ಲಿ ಇಲ್ಲಿಯ ಮೂಲಭೂತವಾದಂಥ ಎರಡು ವಿಷಯಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಅದು ಯಾವುದು ಎಂದರೆ ಟೆಲಿ ಕಮ್ಯುನಿಕೇಷನ್ಸ್ ಮತ್ತು ಎಡಿಬಿಲ್ ಆಯಿಲ್ ಸೀಡ್ಸ್ ಬಗ್ಗೆ ಪ್ರಸ್ತಾಪ ಮಾಡಿದರು. ಆಗ ನಮ್ಮ ಕರ್ನಾಟಕದ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾಗಿ ಶ್ರೀ ರಾಮಕೃಷ್ಣ ಹೆಗಡೆಯವರು ಕೇಂದ್ರ ಸರ್ಕಾರಕ್ಕೆ ಬರೆದ ಪತ್ರದಲ್ಲಿ- ''ನೀವು ಆಮದು ಮಾಡಿಕೊಂಡು ಇಲ್ಲಿ ಡಿಸ್-ಇನ್ಸೆಂಟಿವ್ ಮಾಡುವುದಕ್ಕಿಂತ ನಮಗೆ ಸ್ವಲ್ಪಮಟ್ಟಿಗೆ ದುಬಾರಿ ಎಂದು ಕಂಡುಬಂದರೂ ಕೂಡ ನಾವು ಎಣ್ಣೆಕಾಳುಗಳನ್ನು ಬೆಳೆಯತಕ್ಕಂಥದ್ದಕ್ಕೆ ಪ್ರೋತ್ಸಾಹ ಕೊಡತಕ್ಕಂಥ ರೀತಿಯಲ್ಲಿ

ತಾವು ಅದರ ಉತ್ಪಾದನೆಯನ್ನು ದ್ವಿಗುಣಗೊಳಿಸುವಂಥ ರೀತಿಯಲ್ಲಿ ಸಹಾಯ ಮಾಡಬೇಕೆಂದು'' ತಿಳಿಸಿದ್ದಾರೆ. ಆದ್ದರಿಂದ ಮಾನ್ಯ ಕರ್ಕಿಯವರು ಗಮನ ಹರಿಸಬೇಕಾಗಿರುವಂಥದ್ದು ಏನೆಂದರೆ - ದುಬಾರಿ ಆಗಿದೆ ಎನ್ನುವುದಕ್ಕಿಂತಲೂ ದೇಶೀಯ ಮೂಲಗಳ ಮೂಲಕ ಉತ್ಪಾದನಾ ಕ್ರಿಯೆಗಳಿಗೆ ನಾವು ತೊಡಗಿಸಬೇಕಾಗಿರುವುದರಿಂದ ಮಾನ್ಯ ಪುಟ್ಟಣ್ಣಯ್ಯನವರು ಹೇಳತಕ್ಕಂಥ ಮಾತಿನಲ್ಲಿ ಸತ್ಯಾಂಶವಿದೆ. ಎಲ್ಲೋ ಒಂದು ಕಡೆ ಕೊರತೆ ಆಗಿದೆಯೆಂದು ಹೇಳಿ ಅದಕ್ಕೆ ಆಮದು ಮಾಡಿಕೊಂಡು ತಾತ್ಕಾಲಿಕ ಉತ್ತರ ಕೊಡುವ ಬದಲು ದೇಶೀಯವಾಗಿ ಉತ್ಪನ್ನವನ್ನು ಹೆಚ್ಚು ಮಾಡಿಕೊಳ್ಳಲಿಕ್ಕಾಗಿ ಆಮದು ನೀತಿಯ ನಿರೂಪ ಆಗಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಕಾಶ್‌ರವರು ಹೇಳತಕ್ಕಂಥ ರೀತಿ ನೋಡಿದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಕೇಂದ್ರಕ್ಕೆ ಮೊದಲು ಪತ್ರ ಬರೆದವರು ಅವರಾಗಿದ್ದು, ಈಗ ಕೇಂದ್ರದಲ್ಲಿ ಅವರು ವಾಣಿಜ್ಯ ಸಚಿವರು ಆಗಿ ಈ ನೀತಿಯನ್ನು ಸಡಿಲಗೊಳಿಸಿದವರೂ ಅವರೇ ಆಗಿದ್ದಾರೆ.

ಅಧ್ಯಕ್ಷರು: ಆ ಸಂದರ್ಭದಲ್ಲಿ ಮಾನ್ಯ ಪ್ರಕಾಶ್‌ರವರು ಕೃಷಿ ಸಚಿವರಾಗಿದ್ದರು, ಅವಾಗ ಅವರು ಕೇಂದ್ರಕ್ಕೆ ಪತ್ರ ಬರೆದರು. ಈಗ ಅವರು ಬೇರೆ ಕಡೆಯಲ್ಲಿ ಇರುವುದರಿಂದ ಅವರು ಆ ರೀತಿ ನೀತಿಯನ್ನು ಸಡಿಲಗೊಳಿಸಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಮಾನ್ಯ ಜೆ.ಹೆಚ್.ಪಟೇಲರು ಇಂಧನ ಮತ್ತು ಅಬಕಾರಿ ಸಚಿವರಾಗಿದ್ದರು. ಅವಾಗ 'ನೋಡಿ, ನಮಗೆ ಮುಟ್ಟಲಿಕ್ಕೆಬರಬೇಡಿ, ನಿಮಗೆ ಕಿಕ್ ಬೇಕೋ ಅಥವಾ ಶಾಕ್ ಬೇಕೋ' ಎಂದು ಅವರು ಪದೇ ಪದೇ ನಮಗೆ ಹೇಳುತ್ತಿದ್ದರು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಈ ಕೇಂದ್ರ ಸರ್ಕಾರದ ನೀತಿ ಒಂದು ತರಹ ಮೆಂಟಲ್ ಹಾಸ್ಪಿಟಲ್ ಇದ್ದ ಹಾಗೆ ಇದೆ. ಬೆಳಗಾಂನಲ್ಲಿ ಸಕ್ಕರೆ ಇದ್ದರೆ ಪಾಂಡವಪುರ ಸೊಸೈಟಿಗೆ ತಂದು ಲೆವಿ ಎಂದು ಕೊಡುತ್ತಾರೆ. ಪಾಂಡವಪುರದಿಂದ ಸಕ್ಕರೆ ತೆಗೆದುಕೊಂಡು ಹೋಗಿ ಬೆಳಗಾಂ ಸೊಸೈಟಿಗೆ ಕೊಡುತ್ತಾರೆ. ಲೆವಿ ನೀತಿ ಕೇಂದ್ರಸರ್ಕಾರಕ್ಕೆ ಸೇರಿದೆ. ಇದು ಬಿ.ಜೆ.ಪಿ. ಸರ್ಕಾರ ಕೇಂದ್ರದಲ್ಲಿ ಬಂದಮೇಲೆ ಆಗಿದೆ ಎಂದು ನಾನು ಹೇಳುತ್ತಿಲ್ಲ. ನಾನು ಒಟ್ಟು ವ್ಯವಸ್ಥೆಯಲ್ಲಿ ಆಗಿದೆ ಎಂದು ಹೇಳುತ್ತಿದ್ದೇನೆ.

ಡಾ: ಎಂ.ಪಿ.ಕರ್ಕಿ: ಮಾನ್ಯ ಅಧ್ಯಕ್ಷರೆ, ಈ ರೀತಿ ಆಗುತ್ತಿದ್ದರೆ, ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಸರಿಮಾಡಬೇಕಾಗುತ್ತದೆ. ಇದು ರಾಜ್ಯಸರ್ಕಾರದ

ಜವಾಬ್ದಾರಿಯಾಗಿರುತ್ತದೆ. ಕೇಂದ್ರಸರ್ಕಾರಕ್ಕೆ ತಿಳಿಸದೆಯೇ ಅವರ ಮೇಲೆ ಹೇಳಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಬೇಡಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾವು ಸಾಕಷ್ಟು ಸಲ ಕೇಂದ್ರಕ್ಕೆ ಬರೆದಿದ್ದೇವೆ.

ಶ್ರೀ ಹೆಚ್.ಶಿವಪ್ಪ: ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಸಾಕಷ್ಟು ಸಲ ಕೇಂದ್ರಸರ್ಕಾರದ ಗಮನಕ್ಕೆ ತಂದಿದ್ದಾಗಿದೆ. ಆದರೂ ಸಹ ಬದಲಾವಣೆ ಆಗಿಲ್ಲ. ನಾವು ಇಲ್ಲಿಂದ ಸಕ್ಕರೆಯನ್ನು ಕೇರಳಕ್ಕೆ ಕಳುಹಿಸಬೇಕಾಗಿದೆ.

ಶ್ರೀ ಎಂ.ಪಿ.ಪ್ರಕಾಶ್: ಕೇಂದ್ರ ಸರ್ಕಾರದ ನೀತಿ ಬಗ್ಗೆ ಮಾತನಾಡುವಾಗ ಮಾನ್ಯ ಸದಸ್ಯರು ಅಷ್ಟೊಂದು ಸೂಕ್ಷ್ಮಮತಿಗಳು ಆಗಬೇಕಾಗಿಲ್ಲ. ತಮ್ಮ ಸರ್ಕಾರ ಕೇಂದ್ರದಲ್ಲಿ ಇರುವುದರಿಂದ ಈ ವಿಚಾರದ ಬಗ್ಗೆ ತಾವೂ ಕೂಡ ಸಲಹೆ ಕೊಡಿ. ನಮ್ಮ ಸರ್ಕಾರ ಕೇಂದ್ರದಲ್ಲಿ ಇದ್ದಾಗ ಕೂಡ ನಾವು ಈ ಬದಲಾವಣೆಯನ್ನು ತರಲಿಕ್ಕೆ ಆಗಲಿಲ್ಲ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಮತ್ತು ಅಕ್ಷರಶಃ ಸತ್ಯ ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಪಂಪುಸೆಟ್ಟುಗಳ ಮುಖಾಂತರ ಇಡೀ ರಾಜ್ಯದಲ್ಲಿ 40ರಿಂದ 50 ಲಕ್ಷ ಎಕರೆ ಭೂಮಿಯನ್ನು ನೀರಾವರಿ ಮಾಡಬೇಕಾದರೆ ಸರ್ಕಾರಕ್ಕೆ 15 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಸನ್ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಾ ಇಂಥಿಂಥ ಬಯಲುಸೀಮೆಗಳಿಗೆ ಇಂತಿಷ್ಟು ಹಣ ಕೊಡುತ್ತಿದ್ದೇವೆ ಎಂದು ಹೇಳಿದರು. ಆದರೆ ಈ ಸಣ್ಣ ನೀರಾವರಿ ಸರ್ಕಾರದ ಕಡೆಯಿಂದ ಎಷ್ಟು ಒತ್ತು ಕೊಟ್ಟಿದ್ದೀರಿ? ಅಂದರೆ ಕೇವಲ 109 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ 109 ಕೋಟಿ ರೂಪಾಯಿಗಳ ಮೂಲಕ ಇದೇ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ಮೈನರ್ ಇರಿಗೇಷನ್ನಳ ಕೆಲಸ ಮಾಡುವುದಕ್ಕೆ ಸಾಧ್ಯವೇ? ಅಂತರಜಲದ ಬಗ್ಗೆ ನಾವೆಲ್ಲಾ ಸಾಕಷ್ಟು ಮಾತನಾಡುತ್ತೇವೆ. ಈ ಅಂತರಜಲದ ಬಗ್ಗೆ ಗುಜರಾತಿನಲ್ಲಿ ಒಳ್ಳೆಯ ಪ್ರೋಗ್ರಾಂ ಮಾಡಿದ್ದಾರೆ. ಅಲ್ಲಿಗೆ ಇಲ್ಲಿಂದ ಯಾವುದಾದರೂ ಸಮಿತಿಯನ್ನು ಮಾಡಿ ಕಳುಹಿಸಿದರೆ ಒಳ್ಳೆಯದು. ಆ ಅಂಚಿನಲ್ಲಿ ಬಿದ್ದಂಥ ಎಲ್ಲಾ ನೀರನ್ನು ಅಂತರಜಲದಲ್ಲಿ ಇಂಗಲಿಕ್ಕೆ ಬಾವಿಗೆ ಹೋಗತಕ್ಕಂಥ ವ್ಯವಸ್ಥೆಯನ್ನು ಗುಜರಾತಿನಲ್ಲಿ ಮಾಡಿದ್ದಾರೆ. ಇದನ್ನು ಒಬ್ಬ ಸಾಮಾನ್ಯ ರೈತ ಕಂಡುಹಿಡಿದಿರುವಂಥದ್ದಾಗಿದೆ. ಅಂತರ್‌ಜಲದ ಬಗೆ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಿ ಒಂದು ಬದಲಾವಣೆ ಮಾಡಿದ್ದಾರೆ. ಅಂತರಜಲದ ಬಗ್ಗೆ ನಾವು ಏನು ಮಾಡಿದ್ದೇವೆ? ಆದ್ದರಿಂದ, ದಯವಿಟ್ಟು ಈ ಅಂತರಜಲವನ್ನು ಬಹಳ ದೊಡ್ಡದಾಗಿ ಮಾಡಬೇಕಾದರೆ ಕನಿಷ್ಟ ಸಣ್ಣ ನೀರಾವರಿಗೆ ಸರ್ಕಾರ ಹೆಚ್ಚು ಒತ್ತು ಕೊಡಬೇಕು. ಮಾನ್ಯ ಬೈರೇಗೌಡರ ಹತ್ತಿರ ಹಾಲಿನ ದರದ ಬಗ್ಗೆ ಮಾತನಾಡಿದಾಗ, ಇದಕ್ಕೂ ನನಗೂ ಸಂಬಂಧವಿಲ್ಲ, ಸಂಬಂಧಪಟ್ಟ ಮಂತ್ರಿಗಳು ಹೇಳಬೇಕು ಎಂದು ಹೇಳಿದರು. ಮಾನ್ಯ

ಬೈರೇಗೌಡರು ಇದೇ ಸದನದಲ್ಲಿ ಕ್ರಾಂತಿಯ ರೂಪದಲ್ಲಿ 'ಮಾನ್ಯರೆ, ಎಲ್ಲಾ ಪಕ್ಷಗಳು ಒಮ್ಮತದಿಂದ, ಒಕ್ಕೊರಲಿನಿಂದ 'ಹೂಂ' ಎಂದು ಪಕ್ಷದಲ್ಲಿ ಯಾರು ಎಮ್ಮೆಯನ್ನು ಕಾಯುತ್ತಾರೆ ಆ ರೈತನಿಗೆ ಯಾವುದೇ ಡಿಡಕ್ಷನ್ ಮಾಡದೇ ನೇರವಾಗಿ ಹಣ ಕೊಡುತ್ತೇವೆ' ಎಂದು ಹೇಳಿದರು. ನಾವೆಲ್ಲ 'ಹೂಂ' ಎಂದು ಒಪ್ಪಿಕೊಂಡೆವು. ಆ ನಂತರ ನೀವು 'ಊಹುಂ' ಎಂದಿರಿ. ಇದು ಏಕೆ ಹೀಗೆ ಆಯಿತು? ವೃತ್ತಪತ್ರಿಕೆಯನ್ನು ನೋಡಿದಾಗ ' ಈ ಪಶುಸಂಗೋಪನ ಮಂತ್ರಿಗೂ ಅದಕ್ಕೂ ಏನು ಸಂಬಂಧ? ನಾವು ಹಾಲಿನ ಒಕ್ಕೂಟದವರೇ ತೀರ್ಮಾನ ಮಾಡುತ್ತೇವೆ' ಎಂದು ಹೇಳುತ್ತಾರೆ. ಸದನ ಸುಪ್ರೀಂ ಅಥವಾ ಹಾಲು ಒಕ್ಕೂಟದ ಅಧ್ಯಕ್ಷರು ಯಾರು ಇದ್ದಾರೆ ಅವರು ಸುಪ್ರೀಂ? ಇಲ್ಲಿ ಯಾರು ಸುಪ್ರೀಂ ಎಂಬುದು ಗೊತ್ತಾಗಬೇಕು. ಎಮ್ಮೆ ಕೊಂಡು ಸಾಕುವ ಸಲುವಾಗಿ ಸರ್ಕಾರವೇ ಐಆರ್‌ಡಿಪಿಯಲ್ಲಿ ಸಾಲ ಕೊಟ್ಟಿದ್ದಾರೆ. ಆ ರೈತರಿಂದ ನಾವು 8-50 ರೂ.ಗೆ ಹಾಲು ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ನಿಜವಾಗಿ ತಾವು ಯೋಚನೆ ಮಾಡಬೇಕಾಗುತ್ತದೆ. ಐಆರ್‌ಡಿಪಿಯಲ್ಲಿ ಸಾಲವನ್ನು ಪೂರ್ತಿಯಾಗಿ ಕೊಡುತ್ತಿಲ್ಲ. ಕೇಂದ್ರ ಸರ್ಕಾರ ಒಂದು ಕಾನೂನು ಮಾಡಿದೆ. ಬ್ಯಾಂಕ್ ಮ್ಯಾನೇಜರ್ಸ್ ಸಬ್ಸಿಡಿ ಪೋರ್ಷನ್ ಎಂದು ಇಟ್ಟುಕೊಂಡು ಸಾಲದ ಪೋರ್ಷನ್‌ನ್ನು ಮಾತ್ರ ರೈತರಿಗೆ ಕೊಡುತ್ತಾರೆ. ಒಂದು ಬಟ್ಟೆ ಒಣಗಬೇಕಾದರೂ ಒಂದು ಗಂಟೆ ಸಮಯಬೇಕಾಗುತ್ತದೆ, 100 ಬಟ್ಟೆ ಒಣಗಬೇಕಾದರೂ ಒಂದು ಗಂಟೆ ಬೇಕಾಗುತ್ತದೆ. ಒಂದು ಎಮ್ಮೆಯನ್ನು ಮೇಯಿಸಬೇಕಾದರೂ ಒಬ್ಬನೇ ಹೋಗಬೇಕು, ಮೂರು ಎಮ್ಮೆ ಮೇಯಿಸಬೇಕಾದರೂ ಒಬ್ಬನೇ ಹೋಗಬಹುದು. ಆದ್ದರಿಂದ ಐಆರ್‌ಡಿಪಿ ಕಾನ್ಸೆಪ್ಟ್‌ನಲ್ಲಿ ಒಂದು ಎಮ್ಮೆಗೆ ಅಥವಾ ಒಂದು ಹಸುವನ್ನು ಮಾತ್ರ ಕೊಂಡುಕೊಳ್ಳಲು ಸಾಲ ಕೊಡುವುದು ಎಂದು ಇದೆ. ಬೇರೆ ವರ್ಗದ ಜನರಿಗೆ 40 ಪರ್ಸಂಟ್ ಸಬ್ಸಿಡಿ, ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ 50 ಪರ್ಸಂಟ್ ಸಬ್ಸಿಡಿ ಎಂದು ಇದೆ. ಐಆರ್‌ಡಿಪಿ ಬಗ್ಗೆ ಒಂದು ಮಿಟಿಂಗ್ ಮಾಡಿ ಪೂರ್ಣ ಪ್ರಮಾಣದ ಸಾಲವನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಒಬ್ಬ ವ್ಯಕ್ತಿ ಎಮ್ಮೆಗೋಸ್ಕರ ತನ್ನ ಕಾಲವನ್ನು ವ್ಯಯ ಮಾಡಿ ಇದನ್ನು ಸಾಕುವುದರಿಂದ ಅವನು ತನ್ನ ಕೂಲಿಯನ್ನು ಗಿಟ್ಟಿಸಿಕೊಳ್ಳುವುದಕ್ಕೆ ಕೂಡ ಸಾಕಾಗುವುದಿಲ್ಲ. ಆದ್ದರಿಂದ ಮಾನ್ಯ ಬೈರೇಗೌಡರು ನಾಳೆಯದಿವಸ ತಮ್ಮ ಉತ್ತರದಲ್ಲಿ 1-50 ರೂ. ಕೊಡುವುದಕ್ಕೆ ಆಗುತ್ತದೆ ಅಥವಾ ಇಲ್ಲ, ಎಮ್ಮೆ ಕಾಯುವವನು ಯಾವಾಗಲೂ ಹಾಗೆಯೇ ಇರಬೇಕು ಅಥವಾ ಅವನು ಮುಂದುವರಿಯಬೇಕು ಇತ್ಯಾದಿ ಬಗ್ಗೆ ತಮ್ಮ ತೀರ್ಮಾನವನ್ನು ಹೇಳಬೇಕು.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಐಆರ್‌ಡಿಪಿ ಸಾಲದಲ್ಲಿ ಏನು ಸಬ್ಸಿಡಿ ಎಂದು ಕೊಡುತ್ತೀರಿ, ಆ ಸಬ್ಸಿಡಿ ಪೋರ್ಷನ್‌ನ್ನು ಡಿಪಾಸಿಟ್ ಎಂದು ಇಟ್ಟುಕೊಂಡಿದ್ದಾರೆ. ಪೂರ್ತಿ ಲೋನ್‌ಗೆ ಬಡ್ಡಿ ಹಾಕುತ್ತಾರೆ. ಸಬ್ಸಿಡಿ ಪೋರ್ಷನ್‌ಗೆ

ಎಫ್.ಡಿ.ಇಂಟರೆಷ್ಟ್ ಹಾಕಿದರೆ ಉಳಿದ ಹಣಕ್ಕೆ ಲೋನ್ ಇಂಟರೆಸ್ಟ್ ಹಾಕುವುದರಿಂದ ಇದು ಎರಡೂ ಬಡ್ಡಿ ಸೇರಿ ರೈತರಿಗೆ ಬಡವರಿಗೆ ತುಂಬಾ ಹೊರೆಯಾಗುತ್ತದೆ. ಮೊದಲು ಏನು ಮಾಡುತ್ತಿದ್ದರೆಂದರೆ ಸಬ್ಸಿಡಿ ಪೋರ್ಷನ್ನನ್ನು ಡಿಡಕ್ಟ್ ಮಾಡಿ ಉಳಿದಿರುವಂಥ ಹಣಕ್ಕೆ ಬಡ್ಡಿ ಹಾಕುತ್ತಿದ್ದರು. ಆದರೆ ಈಗಿನ ಪದ್ಧತಿಯಿಂದ ಬಡವರಿಗೆ ಹೊರೆಯಾಗುತ್ತಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ ಎಂಬುದು ಗೊತ್ತಿಲ್ಲ. ಅಥವಾ ಬ್ಯಾಂಕ್‌ನವರೇ ಈ ರೀತಿಯ ಬಡ್ಡಿ ಹಾಕುವಂಥ ಪದ್ಧತಿಯನ್ನು ಮಾಡಿಕೊಂಡಿದ್ದಾರೆಯೇ?

ಶ್ರೀ ಎಂ.ಪಿ.ಪ್ರಕಾಶ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಇಬ್ಬರು ಮಾನ್ಯ ಶಾಸಕರು ಹೇಳಿದಂಥ ವಿಚಾರದಲ್ಲಿ ಸತ್ಯಾಂಶವಿದೆ. ನಮ್ಮ ಲೀಡ್ ಬ್ಯಾಂಕುಗಳು ತಮ್ಮ ಕರ್ತವ್ಯವನ್ನು ಮಾಡಲಿಕ್ಕೆ ವಿಫಲವಾಗಿವೆ. ಅವರು ಸಾಲ ಕೊಟ್ಟಿದ್ದೇವೆಂದು ಹೇಳಿ ಭೌತಿಕ ಗುರಿಯನ್ನು ತೋರಿಸಬೇಕಾದಂಥ ಒಂದೇ ಕಾರಣಕ್ಕಾಗಿ ನಾವು ಕೊಡುವಂಥ ಸಬ್ಸಿಡಿ ಪೋರ್ಷನ್ ಏನು ಇದೆ, ಅದನ್ನು ಇಟ್ಟುಕೊಳ್ಳತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಅನೇಕ ಜನ ಜಿಲ್ಲಾಪಂಚಾಯತ್‌ನಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಇದಕ್ಕೆ ಮ್ಯಾನೇಜರುಗಳ ಸಹಕಾರ ಇಲ್ಲ. ಮ್ಯಾನೇಜರುಗಳು ಏನು ಹೇಳುತ್ತಾರೆಂದರೆ ಸಾಲ ವಸೂಲಾತಿಯಲ್ಲಿ ಯಾವಾಗಲೂ ಹಿಂದೆ ಬಿದ್ದಿದ್ದೇವೆ, ವಸೂಲಾತಿ ಆಗುತ್ತಿಲ್ಲವಾದ್ದರಿಂದ ಈ ಕೆಲಸ ಮಾಡುತ್ತೇವೆಂದು' ಹೇಳುತ್ತಾರೆ. 'ನಮ್ಮ ರಿಕವರಿಗೂ ಮತ್ತು ಸಾಲ ಮಂಜೂರಾತಿ ಮಾಡತಕ್ಕಂಥದ್ದಕ್ಕೂ ಯಾವುದೇ ತರಹದ ಸಂಬಂಧ ಇರಬಾರದು' ಎಂದು ನಾವು ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ ಮತ್ತು ಕೇಂದ್ರಸರ್ಕಾರದ ಸುತ್ತೋಲೆ ಮೇರೆಗೆ ವಿವರಗಳನ್ನು ಕಳುಹಿಸಿಕೊಟ್ಟಿದೆ. ಅದೇ ರೀತಿಯಾಗಿ ಸಾಲ ಪಡೆಯುವ ಬಡವರಿಗೆ 11,600 ರೂಪಾಯಿಗಳನ್ನು ಕೊಡಬೇಕೆಂದು ಕೇಂದ್ರ ಸರ್ಕಾರದ ಸುತ್ತೋಲೆಯ ಆದೇಶ ಇದ್ದರೂ ಕೂಡ, ಯೂನಿಟ್ ಕಾಸ್ಟ್‌ಗೆ ಸರಿಹೋಗಬೇಕೆಂದು ಹೇಳಿ 15 ಸಾವಿರ ರೂ.ಗಳನ್ನು ಕೊಡಬೇಕೆಂದು ನಾವು ಮಾಡಿದ್ದೇವೆ. 15 ಸಾವಿರ ರೂ.ಗಳಿಗಿಂತ ಕಡಿಮೆ ಕೊಟ್ಟರೆ ಅವರು ಹಸು ಅಥವಾ ಎಮ್ಮೆಯನ್ನು ಖರೀದಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಇತಿಮಿತಿಯಲ್ಲಿ 15 ಸಾವಿರ ರೂ.ಗಳು ಒಂದು ಯೂನಿಟ್ ಕಾಸ್ಟ್ ಎಂದು ಮಾಡಿ, ನಾವು ಭೌತಿಕ ಗುರಿಯ ಸಂಖ್ಯೆ ಕಡಿಮೆ ಇಟ್ಟುಕೊಂಡರೂ ಚಿಂತೆ ಇಲ್ಲ, ಆದರೆ 15 ಸಾವಿರ ರೂ.ಗಳನ್ನು ಬಡವರಿಗೆ ಕೊಡಬೇಕು ಎನ್ನತಕ್ಕಂಥ ಆದೇಶವನ್ನು ನಾವು ಕೊಟ್ಟಿದ್ದೇವೆ. ಇಷ್ಟು ಹಣದಲ್ಲಿ 3 ಅಥವಾ 4 ಹಸುಗಳನ್ನು ಕೊಂಡುಕೊಳ್ಳಬಹುದು ಮತ್ತು ಆ ರೀತಿಯಾಗಿ ಬಡವರ ಆರ್ಥಿಕ ಸ್ಥಾನಮಾನ ಸರಿಹೋಗಬಹುದೆಂದು ತಿಳಿದಕೊಂಡಿದ್ದೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಇದರ ಬಗ್ಗೆ ತಾವೆಲ್ಲಾ ಚರ್ಚೆ ಮಾಡಿ ಏನು

ಮಾಡುತ್ತೀರಿ ಎಂದು ನಾಳೆಯ ದಿವಸ ದಯವಿಟ್ಟು ಈ ಸದನದಲ್ಲಿ ಹೇಳಬೇಕು. ಏಕೆಂದರೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಎಂದರೆ- ಬಡತನದಲ್ಲಿರತಕ್ಕಂಥ ಜನರನ್ನು ಆರ್ಥಿಕವಾಗಿ ಮೇಲಕ್ಕೆ ತರುವುದು ಆಗಿದೆ. ಬ್ಯಾಂಕ್‌ನವರು ಏನು ಹೇಳುತ್ತಾರೆಂದರೆ - ಒಂದು ಎಮ್ಮೆ ಕೊಡುತ್ತೇವೆ, ನೀನು ಹೇಗೆ ಎಮ್ಮೆ ಮೇಯಿಸುತ್ತೀಯಾ ನೋಡೋಣ, ಆದರಿಂದ ಹಾಲು ಕರೆದು ಬ್ಯಾಂಕಿನ ಸಾಲ ತೀರಿಸಿದ ಮೇಲೆ ಎರಡನೇ ಎಮ್ಮೆಯನ್ನು ಖರೀದಿ ಮಾಡುವುದಕ್ಕೆ ಸಾಲ ಕೊಡುವ ಸಲುವಾಗಿ ಯೋಚನೆ ಮಾಡುತ್ತೇವೆಂದು ಹೇಳುತ್ತಾರೆ. ಕೊನೆಗೆ ನಾನು 'ಎಲ್ಲಾ ಎಮ್ಮೆಗಳನ್ನು ಎಲ್ಲಾ ಬ್ಯಾಂಕುಗಳು ಮುಂದೆ ತಂದು ಕಟ್ಟಿಹಾಕುತ್ತೇನೆಂದು ಮಂಡ್ಯಾದಲ್ಲಿ ಹೇಳಿದ್ದೇನೆ. ''ಎಮ್ಮೆಗೆ ಮಂಜೂರು ಆಗಿರುವ ಸಾಲವನ್ನು ಎಮ್ಮೆಗೆ ಕೊಡದಿರುವುದರಿಂದ, ಆ ಎಲ್ಲಾ ಎಮ್ಮೆಗಳಿಗೆ ಬರಬೇಕಾದ ಸಾಲವನ್ನು ಕೇಳಲು ಎಮ್ಮೆಗಳು ಬ್ಯಾಂಕುಗಳಿಗೆ ಬರುತ್ತಿವೆ ಎಂದು '' ಹೇಳಿ ಆ ಎಮ್ಮೆಗಳನ್ನು ಹೊಡೆದುಕೊಂಡು ಹೋಗಿ ಸಾಲ ಕೊಡಬೇಕಾದ ಬ್ಯಾಂಕುಗಳ ಮುಂದೆ ಕಟ್ಟೋಣ ಎಂದು ತೀರ್ಮಾನಿಸಿದ್ದೇನೆ.

(ಉಪಾಧ್ಯಕ್ಷರಾದ (ಶ್ರೀ ಚಂದ್ರಶೇಖರ ಎಂ.ಮಾಮನಿಯವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇನ್ನು ಸಕ್ಕರೆ ಕಾರ್ಖಾನೆಗಳ ಬಗ್ಗೆ ಹೇಳುವುದಾದರೆ, ಸನ್ಮಾನ್ಯ ಸಕ್ಕರೆ ಸಚಿವರು ಮಲತಾಯಿ ಧೋರಣೆ ಮಾಡುತ್ತಿದ್ದಾರೆ. ಒಂದು ಸಕ್ಕರೆ ಕಾರ್ಖಾನೆಯನ್ನು ಟೇಕ್‌ಓವರ್ ಮಾಡುವುದಕ್ಕೆ ಏನೇನೋ ಕಸರತ್ತನ್ನು ಮಾಡಿದರು. ಆದರೆ ಖೋಡೆಯವರ ಸಕ್ಕರೆ ಕಾರ್ಖಾನೆಗೆ ಕೈಹಾಕುವುದಿಲ್ಲ. ಆ ಕಾರ್ಖಾನೆಗೆ ಸರ್ಕಾರದ ಕಡೆಯಿಂದ ಕೈಹಾಕದಿರುವುದಕ್ಕೆ ಏನು ಕಾರಣ? ಅವರನ್ನು ಕಂಡರೆ ತಮಗೆ ಹೆದರಿಕೆಯೇ? ದೇವಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಸಲುವಾಗಿ ಮಸೂದೆಯನ್ನು ತರುತ್ತಿದ್ದೀರಿ. ಆದರೆ ಕಳೆದ 4 ವರ್ಷದಿಂದ ಖೋಡೆಯವರು ರೈತರಿಂದ ಕಬ್ಬನ್ನು ತೆಗೆದುಕೊಳ್ಳದೆ ರೈತರೆಲ್ಲಾ ತೊಂದರೆಗೊಳಗಾಗಿದ್ದಾರೆ, 4 ವರ್ಷದಿಂದ ಆ ಸಕ್ಕರೆ ಕಾರ್ಖಾನೆಯ ಕಾರ್ಮಿಕರೆಲ್ಲಾ ಕೆಲಸವಿಲ್ಲದೆ ಬೀದಿ ಪಾಲಾಗಿದ್ದಾರೆ. ಸಹಕಾರಿ ಕಾರ್ಖಾನೆಯಲ್ಲಿ ಇದ್ದಂಥ ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಅವರಿಗೆ ಅಡ್ವಾನ್ಸ್ ಆಗಿ ಕೊಟ್ಟಿದ್ದೀರಿ. ಆ ಖೋಡೆಯವರ ಸಕ್ಕರೆ ಕಾರ್ಖಾನೆಯಿಂದ ಸರ್ಕಾರಕ್ಕೆ ಇನ್ನೂ ಸುಮಾರು ಮೂರರಿಂದ ಮೂರೂವರೆ ಕೋಟಿ ರೂಪಾಯಿಗಳಷ್ಟು ಬಾಕಿ ಬರಬೇಕಾಗಿದೆ. ಅವರ ಕಾರ್ಖಾನೆಯಲ್ಲಿಯ ಆಸ್ತಿಯ ಬೆಲೆ ಸುಮಾರು 55 ರಿಂದ 60 ಕೋಟಿ ರೂಪಾಯಿಗಳಷ್ಟು ಆಗುತ್ತದೆ. 'ಆ ಆಸ್ತಿಯನ್ನು ಮಾರುವುದಕ್ಕೆ ಅವರು ಪ್ರಯತ್ನಪಡುತ್ತಿದ್ದಾರೆ. ಬಾಕಿ ಬರಬೇಕಾದ 3-31/2 ಕೋಟಿ ರೂ.ಗಳನ್ನು ವಸೂಲಿ ಮಾಡಿಲ್ಲ. ಆ ಕಾರ್ಖಾನೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ

ಪಡುತ್ತಿಲ್ಲ. ದೇವಿ ಸಕ್ಕರೆ ಕಾರ್ಖಾನೆಗೆ ಒಂದು ಕಾನೂನು ಆದರೆ ಮಹದೇಶ್ವರ ಸಕ್ಕರೆ ಕಾರ್ಖಾನೆಗೆ ಇನ್ನೊಂದು ಕಾನೂನು, ಇದು ಯಾವ ನ್ಯಾಯ?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದೇವಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದ ವತಿಯಿಂದ ಟೇಕ್‌ಓವರ್ ಮಾಡುತ್ತಿರುವುದು ನಿಜ. ಅದರ ಜೊತೆಗೆ ಈ ಮಹದೇಶ್ವರ ಸಕ್ಕರೆ ಕಾರ್ಖಾನೆಯಿಂದ 3.5 ಕೋಟಿ ರೂಪಾಯಿಗಳ ಸರ್ಕಾರಕ್ಕೆ ಬರಬೇಕಾದ ಬಾಕಿ ಸಲುವಾಗಿ ಈಗಾಗಲೇ ನೋಟೀಸನ್ನು ಜಾರಿಮಾಡಲಾಗಿದೆ. ಕೋರ್ಟಿನಿಂದ ಅವರು ತಡೆಯಾಜ್ಞೆ ತಂದಿರುವುದರಿಂದ ಅದನ್ನು ರಿಕವರಿ ಮಾಡಲಿಕ್ಕೆ ಸಾಧ್ಯವಾಗಿಲ್ಲ. ತಡೆಯಾಜ್ಞೆ ತರುವ ಮೊದಲು ಬಾಕಿ ಬರಬೇಕಾದ ಹಣವನ್ನು ಪಡೆಯುವ ಸಲುವಾಗಿ ಸರ್ವಪ್ರಯತ್ನವನ್ನು ಮಾಡುತ್ತಿದ್ದೆವು. ಅದರ ಜೊತೆಗೆ ದೇವಿ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಟೇಕ್‌ಓವರ್ ಮಾಡಿದ ತಕ್ಷಣ ಈ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಈ ವರ್ಷ ಪ್ರಾರಂಭ ಮಾಡದೇ ಇದ್ದರೆ ಇದನ್ನು ಕೂಡ ಸರ್ಕಾರ ಟೇಕ್‌ಓವರ್ ಮಾಡುವುದಕ್ಕೆ ಶೇಕಡ 100ರಷ್ಟು ಪ್ರಯತ್ನ ಮಾಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. 'ಕಬ್ಬು ತೆಗೆದುಕೊಂಡಿಲ್ಲ, ರೈತರಿಗೆ ದುಡ್ಡು ಕೊಟ್ಟಿಲ್ಲವೆಂದು ಈ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ಒಂದನ್ನು ಬಿಟ್ಟು ಉಳಿದೆಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ಶ್ರೀ ಪುಟ್ಟಣ್ಣಯ್ಯನವರು ಹೋಗಿ ಸ್ಟ್ರೈಕ್ ಮಾಡುತ್ತಾರೆ. ಆದ್ದರಿಂದ ಸದರಿ ಕಾರ್ಖಾನೆಯನ್ನು ಕೂಡ ಟೇಕ್‌ಓವರ್ ಮಾಡಬೇಕೆಂದು ಅವರು ಅಲ್ಲಿ ಹೋಗಿ ಸ್ಟ್ರೈಕ್ ಮಾಡಿ ಒತ್ತಾಯ ತಂದರೆ ಸರ್ಕಾರಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಬಹಳಷ್ಟು ಅನುಕೂಲವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಸರ್ಕಾರದಲ್ಲಿ ದ್ವಂದ್ವ ನೀತಿ ನಡೆಯುತ್ತಿದೆ. ಒಂದು ಕಡೆ ಖಾಸಗಿ ಡಿಫೆಕ್ಟ್ ಕಾರ್ಖಾನೆಗಳನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ, ಇನ್ನೊಂದು ಕಡೆ ಸರ್ಕಾರದ ಸಂಸ್ಥೆಯನ್ನು ಖಾಸಗಿಯವರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಬೀದರ್‌ನಲ್ಲಿ ನಾರಂಜ ಸಕ್ಕರೆ ಕಾರ್ಖಾನೆ ಇದೆ. ಅದಕ್ಕೆ ಕೋಟಿಗಟ್ಟಲೆ ಹಣವನ್ನು ಸರ್ಕಾರದಿಂದ ಕೊಡಲಾಗಿದೆ ಮತ್ತು ಹೆಚ್‌ಕೆಡಿಬಿಯಿಂದಲೂ ಕೊಡಲಾಗಿದೆ. ಇಲ್ಲಿಯವರೆಗೆ ಆ ಕಾರ್ಖಾನೆಗೆ ಸರ್ಕಾರ ಹಣ ಕೊಟ್ಟು ನಡೆಸಿಕೊಂಡು ಹೋಗತಕ್ಕಂಥ ವ್ಯವಸ್ಥೆ ಆಗುತ್ತಿಲ್ಲ. ಆದರೆ ಇಲ್ಲಿ ಖಾಸಗಿ ಸಕ್ಕರೆ ಕಾರ್ಖಾನೆಯಾದ ದೇವಿ ಸಕ್ಕರೆ ಕಾರ್ಖಾನೆಯನ್ನು ಸರ್ಕಾರವೇ ತೆಗೆದುಕೊಳ್ಳುವುದಕ್ಕೆ, ಬಹುಶಃ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಬೇರೆಯವರೂ ಕೂಡ ಒತ್ತಾಯ ತಂದಿದ್ದಾರೆ ಆ ಮಾತು ಬೇರೆ, ಒಟ್ಟಿನಲ್ಲಿ ಅಲ್ಲಿಯ ರೈತರಿಗೆ ಅನುಕೂಲವಾಗಲಿ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ - ಒಂದು ಕಡೆ ತಮ್ಮದೇ ಆದಂಥ ಸಂಸ್ಥೆಯನ್ನು ಬೇರೆಯವರಿಗೆ ಕೊಡುವುದು, ಬೇರೆಯವರ ಸಂಸ್ಥೆಯನ್ನು ನಾವು ತೆಗೆದುಕೊಳ್ಳುವುದು' ಇದು ಸರಿಕಾಣುವುದಿಲ್ಲ. ಈಗಾಗಲೇ

ಕೋಆಪರೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಸಚಿವರು ಏನು ಮಾಡಿದ್ದಾರೆಂದರೆ ಬೀದರ್ ಮತ್ತು ಅಳಂದದಲ್ಲಿ ಒಂದು ಟನ್ ಕಬ್ಬಿಗೆ 600 ರೂಪಾಯಿಗಳನ್ನು ಫಿಕ್ಸ್ ಮಾಡಿದ್ದಾರೆ. ಸ್ವಾಭಾವಿಕವಾಗಿ ಖಂಡಸಾರಿಯವರೂ ಕೂಡ ಅದೇ ರೀತಿಯಾಗಿ ರೇಟ್ ಕೊಡಲಿಕ್ಕೆ ತಯಾರಾಗುತ್ತಾರೆ. ಅನಂತರ ಸರ್ಕಾರದ ಕಡೆಯಿಂದ ನೀವು ಪ್ರಾಫಿಟ್ ಆದ ಮೇಲೆ 50 ಅಥವಾ 100 ರೂ.ಗಳನ್ನು ಟನ್ ಒಂದಕ್ಕೆ ಹೆಚ್ಚಿಗೆ ಮಾಡಬಹುದು. ಆವಾಗ ರೈತರು ಖಂಡಸಾರಿಯವರ ಹತ್ತಿರ ಹೆಚ್ಚಿಗೆ ರೇಟ್ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅಟ್‌ಲೀಸ್ಟ್ ಒಂದು ಪೈಸ್ ಫಿಕ್ಸ್ ಮಾಡಿ. ಏಕೆಂದರೆ ಮುಂಜಾನೆ ನಾನು ಹೈದ್ರಾಬಾದ್‌ಗೆ ಹೋಗಿ ಬರುವಾಗ ಹುಮ್ನಾಬಾದ್‌ನಲ್ಲಿ ಹಳಿಖೇಡ್ ಸಕ್ಕರೆ ಕಾರ್ಖಾನೆಯವರು ನನ್ನನ್ನು ತಡೆಹಿಡಿದು ಈ ಮಾತನ್ನು ಕೇಳಿದರು. ಆದ್ದರಿಂದ ದಯವಿಟ್ಟು ಒಂದು ರೇಟ್ ಫಿಕ್ಸ್ ಮಾಡಿ ಡೈರೆಕ್ಷನ್ ಕೊಡಿ. ಇಲ್ಲ ಎಂದರೆ ಖಂಡಸಾರಿಯವರು ಬೇರೆ ಕಡೆಯಿಂದ ಕಬ್ಬನ್ನು ತೆಗೆದುಕೊಂಡು ಹೋಗುತ್ತಾರೆ ಅಥವಾ ಇಲ್ಲಿ ಹೈಪೈಸ್ ಇದ್ದರೆ ಮಹಾರಾಷ್ಟ್ರಕ್ಕೆ ಹೋಗಿ ತರುತ್ತಾರೆ. ಆದ್ದರಿಂದ ಇದರ ಬಗ್ಗೆ ಕ್ಲಾರಿಫೈ ಮಾಡುವುದು ಉತ್ತಮ.

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸುಮಾರು 15 ವರ್ಷಗಳಿಂದ ಲೈಸನ್ಸ್‌ನ್ನು ಕೊಡುತ್ತಾ ಬಂದಿದ್ದೇವೆ. ಆ ಕಾರ್ಖಾನೆಯವರು ರೈತರಿಂದ 10 ಪರ್ಸಂಟ್‌ನಂತೆ ಸುಮಾರು 5 ಕೋಟಿ ರೂಪಾಯಿಗಳಷ್ಟು ಶೇರ್ ಕಲೆಕ್ಷನ್ ಮಾಡಬೇಕಾಗಿತ್ತು. ಆದರೆ ಅವರು ಕೇವಲ 140 ಲಕ್ಷ ರೂಪಾಯಿಗಳಷ್ಟು ಶೇರ್ ಅಮೌಂಟನ್ನು ಮಾತ್ರ ಕಲೆಕ್ಟ್ ಮಾಡಿದ್ದಾರೆ. ಅವರು ಯಾವ ದಿವಸ ಐದು ಕೋಟಿ ಕಲೆಕ್ಷನ್ ಮಾಡುತ್ತಾರೆ ಆಗ ಅಫೆಕ್ಸ್ ಬ್ಯಾಂಕಿನವರು ಸಾಲ ಕೊಡುವುದಕ್ಕೆ ಮುಂದೆ ಬರುತ್ತಾರೆ ಮತ್ತು ಹಣವನ್ನು ಬಿಡುಗಡೆ ಮಾಡುವುದಕ್ಕೆ ಸರ್ಕಾರ ಕೂಡ ಸಿದ್ಧವಿದೆ. ಆದರೆ ರೈತರಿಂದ 10 ಪರ್ಸಂಟ್ ಶೇರ್ ಹಣವನ್ನು ಕೂಡಿಸುವುದಕ್ಕೆ ಆಗದಿದ್ದುದರಿಂದ ಅಫೆಕ್ಸ್ ಬ್ಯಾಂಕ್‌ನವರು ಸಾಲ ಕೊಡುವುದಕ್ಕೆ ಹಿಂದೆ ಬಿದ್ದಿದ್ದಾರೆ. ರೈತರಿಂದ ಶೇರ್ ರೂಪದಲ್ಲಿ 5 ಕೋಟಿ ರೂಪಾಯಿಗಳನ್ನು ಆ ಕಾರ್ಖಾನೆ ಸಂಗ್ರಹಿಸಿದ ಕೂಡಲೇ ಸರ್ಕಾರ ಆ ಕಾರ್ಖಾನೆಗೆ ಲೋನ್ ಟೈಪ್ ಆಫ್ ಆಗಲಿ, ಸರ್ಕಾರದಿಂದ ಕೊಡುಬೇಕಾದ ಹಣವನ್ನು ಕೊಡುವಂಥ ಪ್ರಯತ್ನ ಮಾಡುತ್ತದೆ. ಇನ್ನು ದೇವಿ ಸಕ್ಕರೆ ಕಾರ್ಖಾನೆಯನ್ನು ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಟೇಕ್‌ಓವರ್ ಮಾಡಿ ನಡೆಸಿಕೊಂಡು ಹೋಗತಕ್ಕಂಥ ವಿಚಾರವನ್ನು ಸರ್ಕಾರದ ಕಡೆಯಿಂದ ನಾವು ಮಾಡುತ್ತಿದ್ದೇವೆ. ಇದರ ಬಗ್ಗೆ ಬಿಲ್‌ನ್ನು ಈ ಸದನದಲ್ಲಿ ತರುತ್ತಿದ್ದೇವೆ. ಇನ್ನು ಖೋಡೆಯವರ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಈಗಾಗಲೇ ಮೂರು ನೋಟೀಸ್‌ಗಳನ್ನು ಸರ್ಕಾರದ ಕಡೆಯಿಂದ ಕೊಡಲಾಗಿದೆ. ಆ ಕಾರ್ಖಾನೆಯನ್ನು ಈ ಸೀಸನ್‌ನಲ್ಲಿ ಪ್ರಾರಂಭ ಮಾಡುತ್ತೇವೆಂದು ಅವರು ರೈಟಿಂಗ್‌ನಲ್ಲಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರು ಈ ಸೀಸನ್‌ನಲ್ಲಿ

ಕಾರ್ಖಾನೆಯನ್ನು ಪ್ರಾರಂಭ ಮಾಡಿದರೆ ಸರಿ, ಮಾಡದೇ ಇದ್ದರೆ ಖಂಡಿತವಾಗಿ ಸರ್ಕಾರ ಆ ಕಾರ್ಖಾನೆಯನ್ನು ಟೇಕ್‌ಓವರ್ ಮಾಡುತ್ತದೆ. ಇದಕ್ಕೆ 101 ಪರ್ಸಂಟ್‌ನಷ್ಟು ಗ್ಯಾರಂಟಿ ಕೊಡುತ್ತೇವೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ.

8.40 ಪಿಎಂ

ಅವರು ದುಡ್ಡು ತುಂಬುವುದಕ್ಕೆ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ. ಈ ತಡಯಾಜ್ಞೆಯಿರುವುದರಿಂದ ದುಡ್ಡು ವಸೂಲಿ ಮಾಡುವುದಕ್ಕಾಗುತ್ತಿಲ್ಲ. ಇದನ್ನು ತೆರವು ಮಾಡಿಸಲು ಲಾ ಡಿಪಾರ್ಟ್‌ಮೆಂಟಿಗೆ ತಿಳಿಸಿ, ಕೂಡಲೇ ಅವರ ಕಡೆಯಿಂದ ದುಡ್ಡು ವಸೂಲಿ ಮಾಡಿಸುವಂಥ ವ್ಯವಸ್ಥೆ ಮಾಡಿಸುತ್ತೇವೆಂದು ತಮ್ಮ ಮುಖಾಂತರ ಅವರಿಗೆ ತಿಳಿಸಬಯಸುತ್ತೇನೆ. ಈ ವರ್ಷ ರಾಜ್ಯದಲ್ಲಿಯಾಗಲಿ, ಮಹಾರಾಷ್ಟ್ರದಲ್ಲಾಗಲಿ, ಕಬ್ಬನ್ನು ಸಾಕಷ್ಟು ಬೆಳೆದಿದ್ದರೂ, ಕಬ್ಬನ್ನು ಮಾತ್ರ ಮಹಾರಾಷ್ಟ್ರಕ್ಕೆ ಕಳುಹಿಸುತ್ತಿರಲ್ಲಿಲ್ಲ. ಓ.ಜಿ.ಎಲ್ ನಿಂದ ಸಕ್ಕರೆ ಸರ್ಕಾರಕ್ಕೆ ಬರುತ್ತಿದ್ದು ಸುಮಾರು ಇನ್ನೂರು ರೂಪಾಯಿಗಳಷ್ಟು ಸಕ್ಕರೆ ಬೆಲೆ ಕಳೆದ ನಾಲ್ಕುತಿಂಗಳುಗಳಿಂದ ಬಿದ್ದು ಹೋಗಿದೆ. ಸಕ್ಕರೆ ಬೆಲೆಯನ್ನು ನೋಡಿಕೊಂಡು ನಾವು ಕಬ್ಬಿನ ಬೆಲೆಯನ್ನು ನಿಗದಿ ಮಾಡಬೇಕಾಗುತ್ತದೆ. ನ್ಯಾಯಾಲಯದಲ್ಲಿ ತಡೆಯಾಜ್ಞೆಯಿರುವುದರಿಂದ ಸಕ್ಕರೆ ಬೆಲೆಯನ್ನು ನಿಗದಿಪಡಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಕಬ್ಬನ್ನು ಬೆಳೆದಿರುವ ರೈತರು ಮತ್ತು ಮೇನೇಜ್‌ಮೆಂಟ್‌ನವರು ಇಬ್ಬರೂ ಕುಳಿತುಕೊಂಡು ಕಬ್ಬಿನ ಬೆಲೆಯನ್ನು ನಿಗದಿ ಮಾಡಿಕೊಳ್ಳಬೇಕಾಗುತ್ತದೆ. ಬೀದರ್ ಹಳ್ಳಿಕೇರಿ ಸಕ್ಕರೆ ಕಾರ್ಖಾನೆಯವರಿಗೆ ಈಗಾಗಲೇ ಮೊದಲನೆಯ ಮುಂಗಡವಾಗಿ ಆರುನೂರು ರೂಪಾಯಿಗಳನ್ನು ಅನೌನ್ಸ್ ಮಾಡಿದ್ದಾರೆ. ಇದಕ್ಕೆ ಕಾರಣ ಏನೆಂದರೆ, ಸಕ್ಕರೆ ಉತ್ಪಾದನೆಯಾದ ಮೇಲೆ ನಾವು ಎಂಬತ್ತೈದು ಪರ್ಸೆಂಟ್ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದಾಗಿ ಆರುನೂರು ರೂಪಾಯಿಗಿಂತ ಹೆಚ್ಚು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ರೈತರು ಮತ್ತು ಮೇನೇಜ್‌ಮೆಂಟ್‌ನವರಿಗೆ ತಿಳುವಳಿಕೆ ಕೊಟ್ಟು ಆ ಬೆಲೆಯನ್ನು ಫಿಕ್ಸ್ ಮಾಡಿದ್ದೇವೆ. ರಾಜ್ಯದಲ್ಲೆಲ್ಲಾ ಈ ರೀತಿ ಸಂಭವಿಸಬಹುದೆಂದು ನಾವು ಈ ರೀತಿ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ತಾವು ಈಗಾಗಲೇ ಹೇಳಿದ ಹಾಗೆ, ಸಕ್ಕರೆ ನಮ್ಮಲ್ಲಿ ಹೆಚ್ಚಾಗಿದೆ. ಬೆಲೆ ನಿಗದಿ ಮಾಡಿಸುವ ಸಲುವಾಗಿ, ತಾವು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಹಿರಿಯ ಸಚಿವರಿಂದ ಕೂಡಿದ ಒಂದು ಡೆಲಿಗೇಷನ್ ಕೇಂದ್ರಸರ್ಕಾರಕ್ಕೆ ಹೋಗಿ ಬಂದರೆ ಒಳ್ಳೆಯದು. ಇಲ್ಲದಿದ್ದರೆ ಇದು ಏನಾಗುತ್ತದೆ ಎಂದರೆ, ನೀವು ಆರುನೂರು ರೂಪಾಯಿ ಬೆಲೆ ಫಿಕ್ಸ್ ಮಾಡಿದರೆ ರೈತರಿಗೆ ಪುನಃ ಎನ್‌ಹಾನ್ಸ್‌ಮೆಂಟ್ ಕೊಡುವುದಕ್ಕೆ ಆಗುವುದಿಲ್ಲ. ಈ ಖಾಂಡಸಾರಿಯವರು ಒಂದು ಸಾರಿ ಎಕ್ಸ್‌ಪ್ಲಾಯಿಟ್ ಮಾಡಿದರೆ ಅವರಂತೂ ಕೊಡುವ

ಪ್ರಶ್ನೆ ಬರುವುದಿಲ್ಲ. ಇದಕ್ಕಾಗಿ ತಾವು ಒಂದು ರೀಜನ್‌ಬಲ್ ರೇಟ್ ಫಿಕ್ಸ್ ಮಾಡಿ, ಒಂದು ಕಾರ್ಖಾನೆಯಿಂದ ಮತ್ತೊಂದು ಕಾರ್ಖಾನೆಗೆ ಐವತ್ತು ರೂಪಾಯಿ ವ್ಯತ್ಯಾಸ ಇದ್ದರೆ ಅಡ್ಡಿಯಿಲ್ಲ. ಆದರೆ ನೂರರಿಂದ-ನೂರೈವತ್ತು ರೂಪಾಯಿ ವ್ಯತ್ಯಾಸವಾದರೆ ಇದು ಯಾವ ನ್ಯಾಯ?

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಸಕ್ಕರೆ ಉತ್ಪಾದನೆಯಾದ ಮೇಲೆ ಮುಕ್ತ ಮಾರುಕಟ್ಟೆಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಕೇಂದ್ರಸರ್ಕಾರದಿಂದ ರಿಲೀಸ್ ಬಂದ ಮೇಲೆ, ಎಷ್ಟರ ಮಟ್ಟಿಗೆ ಅಲ್ಲಿಂದ ರಿಲೀಸ್ ಬರುತ್ತದೆಂದು ನೋಡಿಕೊಂಡು ನಾವು ಮಾರಾಟ ಮಾಡಬೇಕಾಗುತ್ತದೆ. ಒಂದು ವರ್ಷ ಪೂರ್ತಿ ನಾವು ಮಾರಾಟ ಮಾಡಬೇಕು, ನಾವು ಅದರ ಮೇಲೆ ಸಾಲ ತೆಗೆದು ರೈತರಿಗೆ ದುಡ್ಡು ಕೊಡಬೇಕಾಗುತ್ತದೆ. ಒಂದೂಸಾವಿರ ಬೆಲೆಯ ಸಕ್ಕರೆಯನ್ನು ನಾವು ಮಾರಾಟ ಮಾಡಿದರೆ ನಮಗೆ ಎಂಟುನೂರು ರೂಪಾಯಿ ನಮಗೆ ಸಾಲ ದೊರೆಯುತ್ತದೆ. ಅದರಲ್ಲಿ ಇನ್ನೂರು ರೂಪಾಯಿ ಕಬ್ಬು ತರುವುದಕ್ಕೆ ಹಾಗೂ ಕಾರ್ಖಾನೆಯನ್ನು ನಡೆಸುವುದಕ್ಕೆ ಖರ್ಚಾಗುತ್ತದೆ. ಉಳಿದಂಥ ಆರುನೂರು ರೂಪಾಯಿಯನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಹೆಚ್ಚಿನ ಬೆಲೆಯನ್ನು ನಾವು ಅನೌನ್ಸ್ ಮಾಡಿದರೆ ಹೆಚ್ಚು ಹಣ ಕೊಡುವುದಕ್ಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ನಾವು ಹೆಚ್ಚು ಮಾಡಿಲ್ಲ. ಇದರಿಂದಾಗಿ ಕಬ್ಬು ಬೆಳೆಯುವ ರೈತರು ಮತ್ತು ಮೇನೇಜ್‌ಮೆಂಟ್‌ನವರು ಕುಳಿತುಕೊಂಡು ಒಂದು ಬೆಲೆ ಫಿಕ್ಸ್ ಮಾಡಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಆದೇಶ ಹೊರಡಿಸಿಲ್ಲ, ಕಾರಣ ಏನೆಂದರೆ, ಹಿಂದೆ ಕೆಲವು ಸಕ್ಕರೆ ಕಾರ್ಖಾನೆಯವರು, ಸರ್ಕಾರದವರು ರೇಟ್ ಫಿಕ್ಸ್ ಮಾಡಬಾರದೆಂದು ಕೋರ್ಟಿಗೆ ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಸಕ್ಕರೆ ಕಾರ್ಖಾನೆಗೆ ಎಷ್ಟು ಫಿಕ್ಸ್ ಮಾಡಿದ್ದೀರಿ?

ಶ್ರೀ ಉಮೇಶ್ ವಿ.ಕತ್ತಿ: ಆರುನೂರು ರೂಪಾಯಿ ಫಿಕ್ಸ್ ಮಾಡಿದ್ದೇವೆ.. ಇನ್ನು ಮಾಡಿಲ್ಲ.. ಮಾಡುತ್ತೇವೆ..

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ನಂತರ ಜಾಸ್ತಿ ಮಾಡುತ್ತೀರೆಂಬುದು ನಮಗೆ ಗೊತ್ತು.

ಶ್ರೀ ಉಮೇಶ್ ವಿ.ಕತ್ತಿ: ಕಳೆದ ವರ್ಷ ಸಾವಿರ ರೂಪಾಯಿ ಮಾಡಿದ್ದೆವು, ಸಕ್ಕರೆ ಮಾರಿದ ನಂತರ ಕೊಡುತ್ತೇವೆ, ಸಕ್ಕರೆ ಇನ್ನು ಮಾರಿಲ್ಲ; ಹೇಗೆ ಕೊಡುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬೇರೆ ಕಡೆಯಿಂದ ಲಾಭ ಬರುತ್ತದೆ ನೀವು ಸಾವಿರ ರೂಪಾಯಿ ಕೊಡುತ್ತೀರಿ, ಆರುನೂರು ರೂಪಾಯಿ ತೆಗೆದುಕೊಂಡು ರೈತ ಏನು ಮಾಡಬೇಕು?

ಉಪಾಧ್ಯಕ್ಷರು: ಮಾನ್ಯ ಖಿರ್ಗೆಯವರು ಹೇಳಿದ ಹಾಗೆ ಇದರ ಬಗ್ಗೆ ಡೆಲ್ಲಿಗೆ ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗಿ ನಂತರ ಕ್ರಮಕ್ಕೆಗೊಳ್ಳಿ...

ಶ್ರೀ ಉಮೇಶ್ ವಿ.ಕತ್ತಿ: ಇದರ ಬಗ್ಗೆ ಕೇಂದ್ರಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ದೇವಿ ಸಕ್ಕರೆ ಕಾರ್ಖಾನೆಯನ್ನು ಟೇಕ್‌ಓವರ್ ಮಾಡುವುದಕ್ಕೆ ಕೇಂದ್ರಸರ್ಕಾರದಿಂದ ಪರ್ಮಿಷನ್ ಬಂದಿದೆ. ಇಷ್ಟು ಆರು ತಿಂಗಳೊಳಗಾಗಿ ಆ ವಿಧೇಯಕ ಪಾಸ್ ಆಗಿಲ್ಲವೆಂದರೆ ಲ್ಯಾಪ್ಸ್ ಆಗುತ್ತದೆ. ಆಷ್ಟರಿಂದ, ವಿಧೇಯಕವನ್ನು ಇದೇ ಅಧಿವೇಶನದಲ್ಲಿ ಮಂಡನೆ ಮಾಡುತ್ತಿರೋ ಇಲ್ಲವೋ ಎಂದು ಮಾನ್ಯ ಸಕ್ಕರೆ ಸಚಿವರಲ್ಲಿ ನಾನು ಸ್ಪಷ್ಟವಾಗಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ: ಇದೇ ಸದನದಲ್ಲಿ ಆ ವಿಧೇಯಕವನ್ನು ಪಾಸ್ ಮಾಡಿಕೊಂಡು ಟೇಕ್‌ಓವರ್ ಮಾಡುತ್ತೇವೆ. ಏನೂ ತೊಂದರೆಯಿಲ್ಲ.

ಉಪಾಧ್ಯಕ್ಷರು: ಪುಟ್ಟಣ್ಣಯ್ಯನವರೇ, ತಾವು ತಮ್ಮ ಭಾಷಣ ಮುಂದುವರೆಸಿ, ತಮಗೆ ಇನ್ನೆಷ್ಟು ಗಂಟೆ ಬೇಕಾಗಬಹುದು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನನಗೆ ಇನ್ನೊಂದು ಗಂಟೆ ಬೇಕಾಗಬಹುದು.

ಉಪಾಧ್ಯಕ್ಷರು: ನೀವು ಇನ್ನೊಂದು ಗಂಟೆ ಮಾತನಾಡಿದರೆ ನಾನು ಮತ್ತು ನೀವು ಇಬ್ಬರೇ ಇಲ್ಲಿ ಉಳಿಯುವುದು ಎಲ್ಲರೂ ಅವರವರ ಮನೆಗೆ ಹೋಗಿಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಉಪಾಧ್ಯಕ್ಷರೆ, ಈಗಾಗಲೇ 8-45 ಆಗಿದೆ ಮಾನ್ಯ ಸದಸ್ಯರು ಇನ್ನೊಂದು ಗಂಟೆ ಮಾತನಾಡಿದರೆ 9-45 ಆಗುತ್ತದೆ. ಇನ್ನೂ ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ, ಹೀಗಿರುವಾಗ ತಾವು ಏನಾದರೂ ಇಡೀ ರಾತ್ರಿ ಸದನ ನಡೆಸಬೇಕೆಂದು ತೀರ್ಮಾನಿಸಿದ್ದೀರಾ? ಸಲಹಾ ಸಮಿತಿಯಲ್ಲಿ 6 ರಿಂದ 6-30ಕ್ಕೆ ಮುಗಿಸಬೇಕೆಂದು ತೀರ್ಮಾನವಾಗಿತ್ತು, ಈ ರೀತಿ ಮಾಡಿದರೆ ಹೇಗೆ? ಇದು ನನಗೆ ಅರ್ಥವಾಗುತ್ತಿಲ್ಲ; ಏಕೆಂದರೆ ಈಗಾಗಲೇ ಬಹಳ ತಡವಾಗಿರುವುದರಿಂದ ಮಾನ್ಯ ಸದಸ್ಯರು ಬೆಳಿಗ್ಗೆ ಮಾತನಾಡಲಿ ಈಗ ಸಭೆಯನ್ನು ಮುಗಿಸಿಬಿಡೋಣ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸದಸ್ಯರು ಮಾತನಾಡಿದಂಥ ವಿಷಯ ಕೊನೇಪಕ್ಷ ಒಂದು ಲೈನ್ ಆದರೂ ಪತ್ರಿಕೆಗಳಲ್ಲಿ ಬರಬೇಕು. ಈಗಾಗಲೇ ಸಾಕಷ್ಟು ಸಮಯವಾಗಿದೆ, ಪತ್ರಿಕೆಯವರು ತಮ್ಮ ಕಛೇರಿಗಳಿಗೆ ಹೋಗಿ ಆಪರು ಯಾವಾಗ ಬರೆದು ಪತ್ರಿಕೆಯಲ್ಲಿ ಹಾಕುತ್ತಾರೆ? ಆದ್ದರಿಂದ, ನಾಳೆ ಬೆಳಿಗ್ಗೆ ಮಾನ್ಯ ಪುಟ್ಟಣ್ಣಯ್ಯನವರಿಗೆ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು: ನಾಳೆ ಸರ್ಕಾರದಿಂದ ಉತ್ತರ ಕೊಡಿಸಬೇಕಾಗಿದೆ, ಇವತ್ತು ಚರ್ಚೆ

ಮುಗಿಯಬೇಕು, ಆದ್ದರಿಂದ ಮಾನ್ಯ ಸದಸ್ಯರು ಬೇಗ ತಮ್ಮ ಭಾಷಣ ಮುಗಿಸಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ನಾಳೆ ಬೆಳಿಗ್ಗೆ ಸರ್ಕಾರದಿಂದ ಉತ್ತರ ಕೊಡಿಸುವುದಕ್ಕಿಂತ ಮುಂಚೆ ಒಂದು ಗಂಟೆ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಏಕೆಂದರೆ ನಮ್ಮ ಪಕ್ಷದ ವತಿಯಿಂದ ಮಾನ್ಯ ಸದಸ್ಯರಾದ ಮುದ್ದೇಹನುಮೇಗೌಡರು, ಕಾಗೋಡು ತಿಮ್ಮಪ್ಪನವರು, ಚೀಫ್ ವಿಪ್‌ಅವರು ಮಾತನಾಡುವವರು ಇದ್ದಾರೆ, ಆದ್ದರಿಂದ ಈಗ ಸಭೆ ಮುಗಿಸಿ ನಾಳೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು ; ಈಗಾಗಲೇ ಅಧ್ಯಕ್ಷರು ಹೇಳಿದ್ದಾರೆ...

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರು ಹೇಳಿದ್ದಾರೆಂದು ಇಲ್ಲಿ 12-45ಗಂಟೆಯವರೆಗೆ ಕುಳಿತುಕೊಳ್ಳಬೇಕಾಗುತ್ತದೆಯೇ? ನಾಳೆ ಬೆಳಿಗ್ಗೆ ಬೇಕಾದರೆ 9-00 ಗಂಟೆಗೆ ಸಭೆ ಸೇರೋಣ. ಇದಕ್ಕೇನೂ ನಮ್ಮ ಅಭ್ಯಂತರವಿಲ್ಲ, ಒಟ್ಟಿನಲ್ಲಿ ಇವತ್ತು ಇಲ್ಲಿಗೆ ಸಭೆ ಮುಗಿಸಿ ನಾಳೆ ಮಾತನಾಡುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಎನ್.ನಾಗೇಗೌಡ: ನಾಳೆ 10-30ಕ್ಕೆ ಬಿ.ಎ.ಸಿ. ಮೀಟಿಂಗೆ ಇದೆ, ನಾಳೆ 11ಕ್ಕೆ ಸರ್ಕಾರದಿಂದ ಉತ್ತರ ಕೊಡುವುದು ಎಂದು ಈಗಾಗಲೇ ತೀರ್ಮಾನವಾಗಿರುವುದರಿಂದ, ಇವತ್ತು ಎಷ್ಟು ಹೊತ್ತಾದರೂ ಚಿಂತೆಯಿಲ್ಲ ಚರ್ಚೆ ಮುಗಿಸಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್: ನೀವು ಹೇಳುವ ರೀತಿಯಲ್ಲಿ ಇವತ್ತು ರಾತ್ರಿ 12-45ವರೆಗೆ ಇಲ್ಲಿ ಕುಳಿತು ಬೆಳಿಗ್ಗೆ ಸರ್ಕಾರದಿಂದ ಉತ್ತರ ಎಂದರೆ ಇದು ಸರಿಯಿಲ್ಲ. ಇದು ಒಳ್ಳೆಯ ಸಂಪ್ರದಾಯವಲ್ಲ, ದಯಮಾಡಿ ತಮಗೆ ಕೈಮುಗಿದು ಕೇಳಿಕೊಳ್ಳುತ್ತೇನೆ, ಇವತ್ತು ಇಲ್ಲಿಗೆ ಸಭೆ ಮುಗಿಸಿ ಬೆಳಿಗ್ಗೆ ಬೇಕಾದರೆ 9-30ಕ್ಕೆ ನಾವು ಸೇರೋಣ. ಒಬ್ಬ ರೈತ ಸಂಘದ ಮುಖಂಡರು ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡಬೇಕಾದರೆ ಸುಮಾರು ಒಂದೂವರೆಗಂಟೆ ಸಮಯ ಬೇಕಾಗುತ್ತದೆ. ಈಗಾಗಲೇ ಸಾಕಷ್ಟು ಸಮಯವಾಗಿರುವುದರಿಂದ ದಯವಿಟ್ಟು ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ...

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಸದನವನ್ನು ಮುಂದೂಡುವ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳಬೇಕು. ನೀವು ಯಾವ ರೀತಿ ಹೇಳುತ್ತೀರೋ ಆ ರೀತಿ ನಾವು ನಡೆದುಕೊಳ್ಳುತ್ತೇವೆ.

ಶ್ರೀ ಕೆ.ಎನ್.ನಾಗೇಗೌಡ: ವಿರೋಧಪಕ್ಷದವರು ಐದು ದಿವಸಗಳ ಕಾಲ

ದೀರ್ಘವಾಗಿ ಮಾತನಾಡಿದ್ದಾರೆ. ಆದ್ದರಿಂದ ಮತ್ತೆ ನಾಳೆದಿವಸ ಚರ್ಚೆಯನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಕನಿಷ್ಠಪಕ್ಷ ಐದಾರು ಜನ ಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ ಮತ್ತು ಅವಿಶ್ವಾಸ ನಿರ್ಣಯದ ಮೇಲೆ ಓಟಿಂಗ್ ನಡೆಯಬೇಕಾಗಿದೆ. ಆದ್ದರಿಂದ, ಚರ್ಚೆಯನ್ನು ಇವತ್ತೆ ಮುಗಿಸುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್: ನಾಳೆ ದಿವಸ ವಿರೋಧ ಮಾಡದೆ ನಿಮ್ಮ ಉತ್ತರವನ್ನು ಕೇಳುತ್ತಾ ಗಂಭೀರವಾಗಿ ಕುಳಿತುಕೊಂಡಿರುತ್ತೇವೆ. ಆದ್ದರಿಂದ ಮಾನ್ಯ ಪುಟ್ಟಣ್ಣಯ್ಯನವರು ತಮ್ಮ ಚರ್ಚೆಯನ್ನು ನಾಳೆ ಮುಂದುವರಿಸುತ್ತಾರೆ. ಇವತ್ತು ಸದನವನ್ನು ಮುಂದೂಡಿ ನಾಳೆ ಸೇರೋಣ.

ಉಪಾಧ್ಯಕ್ಷರು: ಪುಟ್ಟಣ್ಣಯ್ಯನವರೆ, ತಾವು ಚರ್ಚೆಯನ್ನು ಮುಂದುವರಿಸಿ. ಕಾರ್ಯಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಇವತ್ತು ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯನ್ನು ಮುಗಿಸಬೇಕೆಂದು ನಿರ್ಣಯ ಆಗಿದೆ.

ಶ್ರೀ ವಾಟಾಳ್ ನಾಗರಾಜ್: ಕಾರ್ಯಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಸದನ 9 ಗಂಟೆ ಅಥವಾ 10 ಗಂಟೆಗೆ ನಡೆಯಬೇಕೆಂದು ತೀರ್ಮಾನ ಆಗಿಲ್ಲ. ಇವತ್ತು ಇನ್ನು ನಾಲ್ಕೈದು ಜನ ಮಾತನಾಡಬೇಕಾಗಿದೆ. ಆದ್ದರಿಂದ ಬೆಳಿಗ್ಗೆ ಮುಂದುವರಿಸೋಣ.

ಶ್ರೀ ಕೆ.ಎನ್.ನಾಗೇಗೌಡರು: 12 ಗಂಟೆಯವರೆಗೆ ಮಾತನಾಡಲಿ, ತೊಂದರೆ ಏನೂ ಇಲ್ಲ.

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ದಯಮಾಡಿ ಸಹಕಾರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್: ಮುಂದಿನ ಕಾರ್ಯಕ್ರಮಕ್ಕೆ ಅವಕಾಶವನ್ನು ಕೊಡಬೇಡಿ ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತಿದ್ದೇನೆ. ಇದು ಒಳ್ಳೆಯ ಸಂಪ್ರದಾಯವಲ್ಲ. 9 ಗಂಟೆ ರಾತ್ರಿಯಲ್ಲಿ ಚರ್ಚೆ ಮಾಡೋಣವೆಂದು ಕುಳಿತುಕೊಂಡರೆ...

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ವಾಟಾಳ್ ನಾಗರಾಜ್‌ರವರೆ, ಒಂದು ನಿಮಿಷ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್: ನಾನು ಕುಳಿತುಕೊಳ್ಳುವುದಿಲ್ಲ. ಬೆಳಿಗ್ಗೆ 9 ಗಂಟೆಗೆ ಸದನ ಪ್ರಾರಂಭ ಮಾಡಿ 11 ಗಂಟೆಯವರೆಗೆ ಚರ್ಚೆ ಇಟ್ಟುಕೊಂಡು ನಂತರ ಸರ್ಕಾರದಿಂದ ಉತ್ತರ ಕೊಡಿಸಬಹುದು.

ಉಪಾಧ್ಯಕ್ಷರು: ಸಂಸದೀಯ ವ್ಯವಹಾರಗಳ ಸಚಿವರು ಬರುತ್ತಿದ್ದಾರೆ, ಅವರು ಏನು

ಹೇಳುತ್ತಾರೆಂದು ಕೇಳೋಣ.

ಶ್ರೀ ಕೆ.ಎನ್.ನಾಗೇಗೌಡ: ನಾಳೆ ಬೆಳಿಗ್ಗೆ 9 ಗಂಟೆಗೆ ಸದನ ಸೇರಿ 10-30 ಗಂಟೆಗೆ ಚರ್ಚೆ ಮುಗಿಸಿ ನಂತರ ಕಾರ್ಯಕಲಾಪ ಸಲಹಾ ಸಮಿತಿಯ ಸಭೆಯನ್ನು 10-30 ಗಂಟೆಯಿಂದ 11-00 ಗಂಟೆಯವರೆಗೆ ನಡೆಸಿ, 11-00 ಗಂಟೆ ನಂತರ ಸರ್ಕಾರ ಉತ್ತರ ಕೊಡುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇವತ್ತು ಚರ್ಚೆಯನ್ನು ಮುಗಿಸಲೇಬೇಕು. ಆದ್ದರಿಂದ, 9-30 ಗಂಟೆಯವರೆಗೆ ಇವತ್ತು ಕುಳಿತುಕೊಳ್ಳೋಣ. ಮಾನ್ಯ ವಾಟಾಳ್‌ನಾಗರಾಜ್‌ರವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಸಂಪೂರ್ಣವಾಗಿ ಚರ್ಚೆ ಮುಗಿಯಬೇಕು ಮತ್ತು ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ನಂತರ, ಅವಿಶ್ವಾಸ ನಿರ್ಣಯವನ್ನು ತಂದಿರತಕ್ಕಂಥ ವಿರೋಧಪಕ್ಷದ ನಾಯಕರು ಮತ್ತೆ ಮಾತನಾಡತಕ್ಕಂಥ ಹಕ್ಕು ಇದೆ. ಆದ್ದರಿಂದ, ಇವತ್ತು ಮುಗಿಸುವುದಕ್ಕೆ ನೀವೆಲ್ಲಾ ಸಹಕಾರ ಕೊಡಬೇಕು. ಮಾನ್ಯ ಪುಟ್ಟಣ್ಣಯ್ಯನವರು ಇವತ್ತು ಮಾತನಾಡಿ ಮುಗಿಸಲಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಪುಟ್ಟಣ್ಣಯ್ಯನವರು ಇನ್ನು ಒಂದೂವರೆ ಗಂಟೆ ಕಾಲ ಮಾತನಾಡುತ್ತಾರೆ. ಆಗ ಸಮಯ ರಾತ್ರಿ 12.30 ಗಂಟೆ ಆಗುತ್ತದೆ, ಅಲ್ಲಿಯವರೆಗೆ ನೀವು ಕುಳಿತುಕೊಳ್ಳುತ್ತೀರಾ?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ನಿರ್ಧಾರವನ್ನು ವಿರೋಧ ಮಾಡುತ್ತಾ ನಾನು ಧರಣಿ ಮಾಡುತ್ತೇನೆ. ಎಷ್ಟು ಸಮಯ ಕುಳಿತುಕೊಳ್ಳುತ್ತೀರೋ ನಾನು ನೋಡುತ್ತೇನೆ. ಇವತ್ತು ನಾನು ಇಲ್ಲಿಯೇ ಮಲಗಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಸದನದ ಬಾವಿಯಲ್ಲಿ ಬಂದು ಕುಳಿತುಕೊಂಡರು)

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, ಕಾರ್ಯಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಈ ಒಂದು ಅವಿಶ್ವಾಸ ನಿರ್ಣಯದ ಮೇಲೆ 9ನೇ ತಾರೀಖಿನವರೆಗೆ ಚರ್ಚೆ ಮಾಡಿ 10ನೇ ತಾರೀಖು ಸರ್ಕಾರದಿಂದ ಉತ್ತರ ಕೊಡಿಸಬೇಕೆಂದು ತೀರ್ಮಾನ ಆಗಿದೆ.

ಈ ಕಮಿಟಿಗೆ ಮಾನ್ಯ ವಾಟಾಳ್‌ನಾಗರಾಜ್‌ರವರೂ ಸಹ ಸದಸ್ಯರಾಗಿದ್ದಾರೆ. ಅಲ್ಲಿ ತೀರ್ಮಾನ ಆಗಿರುವುದು ಅವರಿಗೆ ಗೊತ್ತಿದೆ. ಇವತ್ತು ಚರ್ಚೆಯನ್ನು ಮುಗಿಸಿ; ನಾಳೆ ಸರ್ಕಾರ ಉತ್ತರ ಕೊಡಬೇಕು.

ಉಪಾಧ್ಯಕ್ಷರು: ಹಿಂದಿನ ರೆಕಾರ್ಡ್ಸ್ ತೆಗೆದು ನೋಡಿ. ಹಿಂದೆ ಅವಿಶ್ವಾಸ ನಿರ್ಣಯದ ಮೇಲೆ ಮೂರು ದಿವಸಕ್ಕಿಂತ ಹೆಚ್ಚು ಚರ್ಚೆ ಮಾಡಿಲ್ಲ. ಆದರೆ, ಈಗ 5 ದಿವಸ ಚರ್ಚೆ ಮಾಡಿದ್ದೇವೆ. ಮಾನ್ಯ ವಾಟಾಳ್‌ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ಬಂದು ಮಾತನಾಡಬೇಕು.

ಶ್ರೀ ಎಂ.ಸಿ.ನಾಣಯ್ಯ: ನಮ್ಮ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ತೆಗೆದುಕೊಂಡಿರುವ ತೀರ್ಮಾನದ ಪ್ರಕಾರ ಇವತ್ತು ಚರ್ಚೆಯನ್ನು ಮುಕ್ತಾಯಗೊಳಿಸಿ, ನಾಳೆ ಬೆಳಿಗ್ಗೆ ಮುಖ್ಯಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ. ನಂತರ ಅವಿಶ್ವಾಸ ನಿರ್ಣಯದ ಮೇಲೆ ಮತ ಮಾಡಬೇಕಾಗುತ್ತದೆ. ನಾಳೆ ಈ ಚರ್ಚೆ ಮುಂದುವರಿದರೆ ಮುಗಿಯುವುದಿಲ್ಲ, ಆದ್ದರಿಂದ ಚರ್ಚೆ ಇವತ್ತು ಮುಗಿಸಲೇಬೇಕಾಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಸಹಕಾರ ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಇವತ್ತು ಹೆಚ್ಚು ಸಮಯ ಕುಳಿತುಕೊಳ್ಳೋಣ.

ಉಪಾಧ್ಯಕ್ಷರು: ಇವತ್ತು ಪುಟ್ಟಣ್ಣಯ್ಯನವರ ಚರ್ಚೆ ಮುಗಿದ ನಂತರ ಇವತ್ತಿನ ಕಲಾಪವನ್ನು ಮುಕ್ತಾಯ ಮಾಡಿ ನಾಳೆ ಸಭೆಯಲ್ಲಿ ಚರ್ಚೆಗೆ ಅವಕಾಶ ಇಲ್ಲದೆ ಸರ್ಕಾರದ ಉತ್ತರವನ್ನು ಇಟ್ಟುಕೊಳ್ಳೋಣ. ಮಾನ್ಯ ವಾಟಾಳ್‌ನಾಗರಾಜ್‌ರವರೆ, ತಾವು ದಯಮಾಡಿ ತಮ್ಮ ಸ್ಥಾನದಲ್ಲಿ ಬಂದು ಕುಳಿತುಕೊಳ್ಳಿ.

ಶ್ರೀ ವಿ.ಮುನಿಯಪ್ಪ: ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡುವುದಕ್ಕೆ ತಾವು ಸಾಕಷ್ಟು ಸಮಯವನ್ನು ಕೊಡಬೇಕು.

ಉಪಾಧ್ಯಕ್ಷರು: ನಿಮ್ಮ ಕಡೆಯವರಿಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇವೆ. ತಾವು ಈ ರೀತಿ ಮಾತನಾಡಬಾರದು.

ಶ್ರೀ ವಿ.ಮುನಿಯಪ್ಪ: ಕೊಟ್ಟಿರತಕ್ಕಂಥ ಅವಕಾಶವನ್ನು ಪೂರ್ತಿ ಮಾಡುವುದಕ್ಕೆ ಇನ್ನು ಹೆಚ್ಚಿನ ಅವಕಾಶ ಕೊಡಬೇಕು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ನೀವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರೆಂದು ಕಾಯುತ್ತಾ ಕುಳಿತುಕೊಂಡಿದ್ದೇವೆ.

ಉಪಾಧ್ಯಕ್ಷರು: ಕಾರ್ಯಕಲಾಪಗಳ ಸಲಹೆ ಸಮಿತಿ ಸಭೆಯಲ್ಲಿ ನಿಮ್ಮ ನಾಯಕರು 6 ಗಂಟೆ ಸಮಯವನ್ನು ಕೇಳಿದ್ದರು. ಆದರೆ ಅವರೊಬ್ಬರೇ 6 ಗಂಟೆಗಳ ಕಾಲ

ಮಾತನಾಡಿದ್ದಾರೆ. ಮತ್ತೆ ನಿಮ್ಮಲ್ಲಿ 10 ಜನ 1.5 ಗಂಟೆ ಸಮಯವನ್ನು ಒಬ್ಬೊಬ್ಬರು ತೆಗೆದುಕೊಂಡು ಮಾತನಾಡಿದ್ದೀರಿ. ಇಷ್ಟೊಂದು ಸಮಯವನ್ನು ತೆಗೆದುಕೊಂಡರೂ ಸಮಯ ಕೊಟ್ಟಿಲ್ಲವೆಂದು ಮಾತನಾಡಬೇಡಿ. ಆದ್ದರಿಂದ ಎಲ್ಲಾ ಸದಸ್ಯರು ಸಹಕಾರ ಮಾಡಿದರೆ ಸಭೆ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಪುಟ್ಟಣ್ಣಯ್ಯನವರೆ, ತಾವು ದಯಮಾಡಿ ಚರ್ಚೆಯನ್ನು ಮುಂದುವರಿಸಿ ಆದಷ್ಟು ಬೇಗ ಮುಗಿಸಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಈಗ ಮಾತನಾಡುವುದಕ್ಕೆ ಮನಸ್ಸು ಇಲ್ಲ, ಆದ್ದರಿಂದ ನಾಳೆ ಬೆಳಿಗ್ಗೆ ಮಾತನಾಡುತ್ತೇನೆ. ಈಗ ಇಲ್ಲಿ ಹೇಗಾಗಿದೆ ಎಂದರೆ, ನಮ್ಮ ಊರಿನಲ್ಲಿ ಒಂದು ನಾಟಕವಾಯಿತು. ನಾಟಕ ನೋಡಲು ಬಂದವರೆಲ್ಲರೂ ಹೋಗಿ ಕೊನೆಗೆ 6 ಜನ ಮಾತ್ರ ಉಳಿದುಕೊಂಡಿದ್ದರು. ನಾಟಕ ಮುಗಿದ ಮೇಲೆ ನಾನು ಅವರಿಗೆ ನಮ್ಮ ನಾಟಕ ಚೆನ್ನಾಗಿತ್ತಾ ಎಂದು ಕೇಳಿದ್ದಕ್ಕೆ ಅವರು ಏನು ಹೇಳಿದರೆಂದರೆ, ನಾಟಕದ ಸೀನ್ಸ್‌ನವರಿಗೆ ನಮ್ಮ ಹಗ್ಗವನ್ನು ಕೊಟ್ಟಿದ್ದೆವು, ಅದನ್ನು ವಾಪಸ್ಸು ಪಡೆದುಕೊಂಡು ಹೋಗಲು ಇಲ್ಲಿ ಕುಳಿತುಕೊಂಡಿದ್ದೇವೆಂದು ಹೇಳಿದರು. ಹಾಗಾಗುತ್ತದೆ ನನ್ನ ಭಾಷಣ.

(ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

3. ಸಮಿತಿಯ ರಚನೆಯ ಪ್ರಸ್ತಾವ

ವಿಷಯ: ''ತುಮಕೂರು ಜಿಲ್ಲೆಯ ಶಿರಾ ಪಟ್ಟಣದ ಕೃಷಿ ಮಾರುಕಟ್ಟೆಯಲ್ಲಿ ಕಡಲೆಕಾಯಿ ಬೆಲೆ ಕುರಿತು ಪ್ರತಿಭಟನೆ ಹಾಗೂ ರೈತರು ಗೋಲಿಬಾರ್‌ನಿಂದ ಸಾವಿಗೀಡಾಗಿರುವ ಬಗ್ಗೆ ಹಾಗೂ ಹಲವಾರು ಜನರು ಗಾಯಗೊಂಡಿರುವವರ ಬಗ್ಗೆ ಪರಿಹಾರ ಸೂಚಿಸಲು ಜಂಟಿ ಸದನ ಸಮಿತಿಯ ಸದಸ್ಯರ ನೇಮಕ.''

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರು): ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ಶಿರಾ ಪಟ್ಟಣದಿಂದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ರೈತರು ಬೆಳೆದ ಕಡಲೆಕಾಯಿ ಬೆಲೆಯು ದಿಢೀರನೆ ಕುಸಿದಿದ್ದರಿಂದ ದಿನಾಂಕ: 28ನೇ ಅಕ್ಟೋಬರ್ 1998ರಂದು ರೈತ ಸಮುದಾಯವು ಪ್ರತಿಭಟನೆ ವ್ಯಕ್ತಪಡಿಸಿದಾಗ ಪೊಲೀಸರಿಂದ ರೈತರ ಮೇಲೆ ನಡೆದ ಗೋಲಿಬಾರ್‌ನಿಂದಾಗಿ ಸಾವುನೋವುಂಟಾಗಿರುವ ಬಗ್ಗೆ ಸದನದಲ್ಲಿ ಪ್ರಸ್ತಾವವಾಗಿ ಐದು ಜನರ ಸಾವಿಗೆ ಹಾಗೂ ಇತರೆ ಹಲವಾರು ಜನರು ಗಾಯಗೊಂಡಿರುವ ಸಂದರ್ಭದ ಬಗ್ಗೆ ವಿಚಾರಣೆಯನ್ನು ನಡೆಸಲು ಹಾಗೂ ಇಂತಹ